ಪ್ರಥಮ ಪಿ.ಯು.ಸಿ. ಪ್ರಶ್ನೆ ಕೋಶ 2019-20

ಅರ್ಥಶಾಸ್ತ್ರದಲ್ಲಿ ಸಂಖ್ಯಾಶಾಸ್ತ್ರ

ಅಧ್ಯಾಯ-1 ಪೀಠಿಕೆ

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ನೀವು ಉದ್ಯೋಗದಲ್ಲಿದ್ದು, ಸಂಭಾವನೆಗಾಗಿ ಕೆಲಸ ಮಾಡುತ್ತಿದ್ದರೆ, ನಿಮ್ಮನ್ನು ಹೀಗೆನ್ನುವರು.

   ಎ. ನಿರುದ್ಯೋಗಿ ಬಿ. ನಾಯಕ

   ಸಿ. ಉದ್ಯೋಗಿ ಡಿ. ಧರ್ಮದರ್ಶಿ

2. ಕೊರತೆಯು ಇದರ ಮೂಲ ಕಾರಣವಾಗಿದೆ.

   ಎ. ಎಲ್ಲಾಆರ್ಥಿಕ ಸಮಸ್ಯೆಗಳಿಗೆ ಬಿ. ಸಾಮಾಜಿಕ ಸಮಸ್ಯೆಗಳಿಗೆ

   ಸಿ. ರಾಜಕೀಯ ಸಮಸ್ಯೆಗಳಿಗೆ ಡಿ. ಎಲ್ಲಾರೀತಿಯ ಸಮಸ್ಯೆಗಳಿಗೆ

3. ರೈಲು ನಿಲ್ದಾಣ, ಬಸ್‌ನಿಲ್ದಾಣ, ಸಿನಿಮಾ ಮಂದಿರಗಳಲ್ಲಿನ ಉದ್ದದ ಸರತಿ ಸಾಲು ಇದರ ಕರುಹುಗಳಾಗಿವೆ.

   ಎ. ಪ್ರಚಾರ ಬಿ. ಕೊರತೆ

   ಸಿ. ಅಪರಿಮಿತ ಡಿ. ಪ್ರಮಾಣ

4. ಸಂಪನ್ಮೂಲಗಳ ಪರ್ಯಾಯ ಬಳಕೆಯು ಈ ಸಮಸ್ಯೆಯ ಉದ್ಭವಕ್ಕೆ ಕಾರಣವಾಗುತ್ತದೆ.

   ಎ. ಹಕ್ಕು ಬಿ. ಬೆಲೆ

   ಸಿ. ಆಯ್ಕೆ ಡಿ. ಅವಕಾಶ

5. ದೈನಂದಿನ ಜೀವನ ವ್ಯವಹಾರಗಳಲ್ಲಿ ಮಾನವನ ಅಧ್ಯಯನದ ಸುತ್ತ ಈ ವಿಷಯವು ಸುತ್ತುತ್ತದೆ.

   ಎ. ಇತಿಹಾಸ ಬಿ. ಅರ್ಥಶಾಸ್ತ್ರ

   ಸಿ. ರಾಜ್ಯಶಾಸ್ತ್ರ ಡಿ. ಸಮಾಜಶಾಸ್ತ್ರ

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ನೀವು ಸರಕಗಳನ್ನು ಖರೀದಿಸಿದಾಗ ನಿಮ್ಮನ್ನು _____ ಎಂದು ಕರೆಯುವರು
2. ನೀವು ಸರಕುಗಳನ್ನು ಉತ್ಪಾದಿಸಿದಾಗ ನಿಮ್ಮನ್ನು _____ ಎಂದು ಕರೆಯುವರು
3. ನೀವು ಲಾಭಕ್ಕಾಗಿ ಸರಕುಗಳನ್ನು ಮಾರಾಟ ಮಾಡಿದಾಗ ನಿಮ್ಮನ್ನು _____ ಎಂದು ಕರೆಯುವರು.
4. ಸಂಪನ್ಮೂಲಗಳು ಮಿತಿಯಲ್ಲಿವೆ, ಆದರೆ ಬಯಕೆಗಳು _____
5. ದತ್ತಾಂಶಗಳು, ಸಂಖ್ಯೆಗಳು, ಸಮೀಕರಣಗಳು _____ ದಲ್ಲಿ ಬಳಸಲ್ಪಡುತ್ತದೆ.

III. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ)

1. ಆಲ್ಫ್ರೆಡ್ ಮಾರ್ಷಲ್ ಪ್ರಕಾರ ಅರ್ಥಶಾಸ್ತ್ರ ಎಂದರೇನು?
2. ಆರ್ಥಿಕ ದತ್ತಾಂಶವೆಂದರೇನು?

3. ರಾಷ್ಟ್ರೀಯ ವರಮಾನವನ್ನು ಕೂಲಿ, ಲಾಭ, ಗೇಣಿ ಮತ್ತು ಬಡ್ಡಿಗಳೆಂದು ಭಾಗ ಮಾಡುವುದನ್ನು ಏನೆಂದು ಕರೆಯುತ್ತೇವೆ?

4. ಸಂಖ್ಯಾಶಾಸ್ತ್ರ ಎಂದರೇನು?

IV. ಕೆಳಗಿನ ಪ್ರಶ್ನೆಗಳಿಗೆ ಸುಮಾರು ನಾಲ್ಕು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕವನ್ನು ಹೊಂದಿರುತ್ತದೆ.)

1. ಅರ್ಥಶಾಸ್ತ್ರವನ್ನು ಸಾಮಾನ್ಯವಾಗಿ ಯಾವ 3 ಭಾಗಗಳಲ್ಲಿ ಚರ್ಚಿಸಲಾಗುತ್ತದೆ?

2. ಉದ್ಯೋಗಿ ಮತ್ತು ಉದ್ಯೋಗದಾತರ ನಡುವಿನ ವ್ಯತ್ಯಾಸವನ್ನು ತಿಳಿಸಿ.

3. ನೀವು ನಿತ್ಯ ಜೀವನದಲ್ಲಿ ಕಾಣುವ ಎರಡು ಕೊರತೆಗಳನ್ನು ತಿಳಿಸಿ.

4. ಪರ್ಯಾಯ ಉಪಯೋಗವುಳ್ಳ ಯಾವುದಾದರೂ ಎರಡು ಸಂಪನ್ಮೂಲಗಳನ್ನು ಹೆಸರಿಸಿ.

V. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕವನ್ನು ಹೊಂದಿರುತ್ತದೆ.)

1. "ನಿಜ ಜೀವನದಲ್ಲಿ ನಾವು ಅಲ್ಲಾದೀನ್‌ನಷ್ಟು ಅದೃಷ್ಟವಂತರಾಗಲು ಸಾಧ್ಯವಿಲ್ಲ". ಈ ಹೇಳಿಕೆಯನ್ನು ಸಮರ್ಥಿಸಿ.

2. ಕೊರತೆಯು ಎಲ್ಲಾ ಆರ್ಥಿಕ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ. ಈ ಹೇಳಿಕೆಯನ್ನು ವಿವರಿಸಿ.

3. ಸಂಖ್ಯಾಶಾಸ್ತ್ರವು ಅರ್ಥಶಾಸ್ತ್ರದ ಅಧ್ಯಯನಕ್ಕೆ ಹೇಗೆ ನೆರವಾಗಿದೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.

4. ಸಂಖ್ಯಾತ್ಮಕ ವಿಧಾನಗಳು ಸಾಮಾನ್ಯ ಜ್ಞಾನಕ್ಕೆ ಪರ್ಯಾಯವಲ್ಲ ! ಉದಾಹರಣೆಯೊಂದಿಗೆ ತಿಳಿಸಿ.

* * *

ಅಧ್ಯಾಯ-2

ದತ್ತಾಂಶಗಳ ಸಂಗ್ರಹಣೆ

I . ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಕೆಳಗಿನ ಯಾವ ದತ್ತಾಂಶ ಸಂಗ್ರಹಣೆಯ ವಿಧನಾವು ಉತ್ತಮ ಫಲಿತಾಂಶವನ್ನು ನೀಡುತ್ತದೆ?

   ಎ. ಜನಗಣತಿ ಬಿ ಮಾದರಿ ಸಮೀಕ್ಷೆ

   ಸಿ. ಆವಿಷ್ಕಾರ ಡಿ. ವಿತರಣೆ

2. ಕೆಳಗಿನ ಯಾವ ದೋಷಗಳು ಹೆಚ್ಚು ಗಂಬೀರವಾದುದು?

   ಎ. ಮಾದರಿ ಆಯ್ಕೆಯ ದೋಷಗಳು ಬಿ. ಮಾದರಿ ಆಯ್ಕೆಯಲ್ಲದ ದೋಷಗಳು

   ಸಿ. ದತ್ತಾಂಶದ ದೋಷಗಳು ಡಿ. ಲೆಕ್ಕಾಚಾರದಲ್ಲಿನ ದೋಷಗಳು.

3. ಪ್ರತಿಕ್ರಿಯನ್ನು ನೋಡುವಂತಹ ದತ್ತಾಂಶ ಸಂಗ್ರಹಣೆಯ ವಿಧಾನವೆಂದರೆ.

   ಎ. ದೂರವಾಣಿ ಸಂರಕ್ಷಣೆ ಬಿ. ಅಂಚೆ ಮೂಲಕ ಪ್ರಶ್ನಾವಳಿ ರವಾನೆ

   ಸಿ. ವೈಯಕ್ತಿಕ ಸಂದರ್ಶನ ಡಿ. ಇ–ಮೇಲ್.

II . ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಸಂಶೋಧಕನು ಸಂಗ್ರಹಿಸಿದ ದತ್ತಾಂಶಕ್ಕೆ ----------ಎಂದು ಹೆಸರು.
2. ಕಡಿಮೆ ಅವಧಿಯಲ್ಲಿ ಮಾಹಿತಿಯನ್ನು ಸಂಗ್ರಹಿಸಬಹುದಾದ ಸಂದರ್ಶನ _____
3. ಅಧಿಕ ವೆಚ್ಚವಾಗುವ ಸಂದರ್ಶನದ ವಿಧಾನ _____
4. ಅನಕ್ಷರಸ್ಥರು ಉಪಯೋಗಿಸಲು ಸಾಧ್ಯವಿಲ್ಲದ ದತ್ತಾಂಶ ಸಂಗ್ರಹಣೆಯ ವಿಧಾನ _____
5. ಭಾರತದ ಜನಗಗಣತಿಯು _____ವರ್ಷಕ್ಕೊಮ್ಮೆ ನಡೆಯುತ್ತದೆ.

III. ಹೊಂದಿಸಿ ಬರೆಯಿರಿ (ಒಟ್ಟು 5 ಅಂಕಗಳು)

ಅ	ಬ
1. ವೈಯಕ್ತಿಕ ಸಂದರ್ಶನ	ಪೂರ್ವಭಾವಿ ಪ್ರಶ್ನಾವಳಿ
2. ಅಂಚೆಮೂಲಕ ಪ್ರಶ್ನಾವಳಿ	ಎಲ್ಲಾ ವ್ಯಕ್ತಿಗಳನ್ನು ಒಳಗೊಂಡಿರುತ್ತದೆ
3. ದೂರವಾಣಿ ಸಂದರ್ಶನ	ಕಳೆದು ಹೋಗುವಿಕೆ
4. ಪೈಲೆಟ್ ಸಮೀಕ್ಷೆ.	ಸಾಪೇಕ್ಷವಾಗಿ ಕಡಿಮೆ ವೆಚ್ಚ
5. ಜನಗಣತಿ	ಅಧಿಕ ವೆಚ್ಚ

IV. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಚಲಕ ಎಂದರೇನು?
2. "ಜನಗಣತಿ" ಅರ್ಥ ಬರೆಯಿರಿ.

3. ಮಾದರಿ ಸಮೀಕ್ಷೆ ಎಂದರೇನು?

4. ಮಾದರಿ ಆಯ್ಕೆಯ ದೋಷ ಎಂದರೇನು?

5. NSSO ವಿಸ್ತರಿಸಿ

6. CSO ವಿಸ್ತರಿಸಿ

7. DGCIS. ವಿಸ್ತರಿಸಿ.

V. ಕೆಳಗಿನ ಪ್ರಶ್ನೆಗಳಿಗೆ ಸುಮಾರು ನಾಲ್ಕು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕವನ್ನು ಹೊಂದಿರುತ್ತದೆ.)

1. ದತ್ತಾಂಶದ ಎರಡು ಮೂಲಗಳು ತಿಳಿಸಿ.

2. ಉತ್ತಮ ಪ್ರಶ್ನಾವಳಿಯ ಎರಡು ಗುಣಲಕ್ಷಣಗಳನ್ನು ಬರೆಯಿರಿ.

3. ದತ್ತಾಂಶಗಳನ್ನು ಸಂಗ್ರಹಿಸುವ ಯಾವುದಾದರೂ ಎರಡು ವಿಧಾನಗಳನ್ನು ತಿಳಿಸಿ.

4. ಜನಗಣತಿ ಮತ್ತು ಮಾದರಿ ಸಮೀಕ್ಷೆಯ ವ್ಯತ್ಯಾಸ ಬರೆಯಿರಿ.

5. ಯಾದೃಚ್ಛಿಕ ಮಾದರಿಯಲ್ಲಿ ಮಾದರಿಯನ್ನು ಆಯ್ಕೆ ಮಾಡುವ ಎರಡು ವಿಧಾನಗಳನ್ನು ತಿಳಿಸಿ.

6. ಪೈಲಟ್ ಸಮೀಕ್ಷೆಯ ಅರ್ಥ ತಿಳಿಸಿ.

VI. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕವನ್ನು ಹೊಂದಿರುತ್ತದೆ.)

1. ಲಾಟರಿ ವಿಧಾನವು ಯಾವಾಗಲೂ ಅನಿಶ್ಚಿತ (ಯಾದೃಚ್ಛಿಕ) ಮಾದರಿಯನ್ನು ನೀಡುತ್ತದೆಯೆ? ವಿವರಿಸಿ.

2. ಮಾದರಿ ದೋಷಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

3. ಯಾದೃಚ್ಛಿಕ ಮಾದರಿ ಎಂದರೇನು? ಸಂಕ್ಷಿಪ್ತವಾಗಿ ವಿವರಿಸಿ.

4. ಜನಗಣತಿ ಮತ್ತು ಎನ್. ಎಸ್. ಎಸ್. ಓ. ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.

VII. ಯೋಜನೆ ಆಧಾರಿತ ಪ್ರಶ್ನೆ (5 ಅಂಕಗಳು)

1. ನೀವು ಒಬ್ಬ ಸಂಶೋಧನಾ ವಿದ್ಯಾರ್ಥಿಯಾಗಿದ್ದು, ನೀವು ಶಾಲೆಗಳಲ್ಲಿ ಬಿಸಿಯೂಟದ ಮಾದರಿ ಸಮೀಕ್ಷೆ ಮಾಡಬೇಕಾಗಿದೆ ಎಂದುಕೊಳ್ಳಿ, ನಿಮ್ಮ ಸಮೀಕ್ಷೆಗೆ ಸರಿ ಹೊಂದುವ ಉತ್ತಮವಾದ ಪ್ರಶ್ನಾವಳಿಯನ್ನು ತಯಾರಿಸಿ.

* * *

ಅಧ್ಯಾಯ– ೮

ದತ್ತಾಂಶಗಳ ಸಂಘಟನೆ

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ವರ್ಗಮಧ್ಯಬಿಂದುವು ಇದಕ್ಕೆ ಸಮನಾಗಿರುತ್ತದೆ.
   - ಎ. ವರ್ಗದ ಮೇಲ್ಮಿತಿ ಮತ್ತು ಕೆಳಮಿತಿಯ ಸರಾಸರಿ.
   - ಬಿ. ಮೇಲ್ಮಿತಿ ಮತ್ತು ಕೆಳಮಿತಿಯ ಗುಣಲಬ್ಧಕ್ಕೆ ಸಮನಾಗಿರುತ್ತದೆ
   - ಸಿ. ಮೇಲ್ಮಿತಿ ಮತ್ತು ಕೆಳಮಿತಿಯ ಅನುಪಾತಕ್ಕೆ ಸಮನಾಗಿರುತ್ತದೆ.
   - ಡಿ. ಮೇಲಿನ ಯಾವುದೂ ಅಲ್ಲ.
2. ಎರಡು ಚಲಕಗಳ ಆವೃತ್ತಿ ವಿತರಣೆಯನ್ನು ಹೀಗೆ ಕರೆಯುವರು.
   - ಎ. ಏಕ ಚಲಕ ವಿತರಣೆ.
   - ಬಿ. ದ್ವಿಚಲಕ ವಿತರಣೆ
   - ಸಿ. ಬಹುಚಲಕ ವಿತರಣೆ.
   - ಡಿ. ಮೇಲಿನ ಯಾವುದೂ ಅಲ್ಲ.
3. ವರ್ಗೀಕೃತ ದತ್ತಾಂಶದಲ್ಲಿ ಸಂಖ್ಯಾತ್ಮಕ ಲೆಕ್ಕಾಚಾರವು ಇದನ್ನು ಆಧರಿಸಿದೆ.
   - ಎ. ಪ್ರಾಪ್ತಂಕಗಳ ನೈಜ ಮೌಲ್ಯಗಳು.
   - ಬಿ. ವರ್ಗದ ಮೇಲ್ಮಿತಿ
   - ಸಿ. ವರ್ಗದ ಕೆಳಮಿತಿ.
   - ಡಿ. ವರ್ಗ ಮಧ್ಯಬಿಂದು.
4. ಒಂದು ವರ್ಗದ ಕೆಳಮಿತಿಯು ಅದರ ಹಿಂದಿನ ಮೇಲ್ಮಿತಿಗೆ ಸಮನಾಗಿದ್ದರೆ ಅದನ್ನು ಹೀಗೆನ್ನುತೇವೆ.
   - ಎ. ಒಳಗೊಂಡ ಪದ್ಧತಿ
   - ಬಿ. ಹೊರತಾದ ಪದ್ಧತಿ
   - ಸಿ. ವರ್ಗಾಂತರ.
   - ಡಿ. ಮೇಲಿನ ಯಾವುದೂ ಅಲ್ಲ.
5. ವ್ಯಾಪ್ತಿಯು.
   - ಎ. ಅತಿ ದೊಡ್ಡ ಮತ್ತು ಅತಿ ಚಿಕ್ಕ ಪ್ರಾಪ್ತಾಂಕದ ನಡುವಿನ ವ್ಯತ್ಯಾಸವಾಗಿದೆ.
   - ಬಿ. ಅತಿ ದೊಡ್ಡ ಮತ್ತು ಅತಿ ಚಿಕ್ಕ ಪ್ರಾಪ್ತಾಂಕದ ಸರಾಸರಿ.
   - ಸಿ. ಅತಿ ದೊಡ್ಡ ಮತ್ತು ಅತಿ ಚಿಕ್ಕ ಪ್ರಾಪ್ತಾಂಕದ ಅನುಪಾತ.
   - ಡಿ. ಮೇಲಿನ ಯಾವುದೂ ಅಲ್ಲ

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಬೌಗೋಳಿಕ ಪ್ರದೇಶಕ್ಕೆ ಅನುಗುಣವಾಗಿ ವರ್ಗೀಕರಿಸಲ್ಪಡುವ ದತ್ತಾಂಶವನ್ನು ---------- ಎಂದು ಕರೆಯವರು.
2. ಗುಣಲಕ್ಷಣಗಳಿಗೆ ಅನುಗುಣವಾಗಿ ದತ್ತಾಂಶಗಳನ್ನು ವರ್ಗೀಕರಿಸುವುದಕ್ಕೆ ---------- ಎಂದು ಕರೆಯವರು.
3. ವರ್ಗದ ಎರಡು ಮಿತಿಗಳನ್ನು ---------ಎಂದು ಕರೆಯುವರು.
4. ---------- ಒಂದು ವರ್ಗದ ಮೇಲ್ಮಿತಿ ಮತ್ತು ಕೆಳಮಿತಿಯ ಸರಾಸರಿಯಾಗಿದೆ.
5. ದತ್ತಾಂಶಗಳ ವರ್ಗೀಕರಣದ ----------ವಿಧಾನದಲ್ಲಿ ವರ್ಗದ ಮೇಲ್ಮಿತಿಯನ್ನು ಸೇರಿಸಿಕೊಳ್ಳಲಾಗುತ್ತದೆ.
6. ಅಸತತ ದತ್ತಾಂಶಗಳ ಆವೃತ್ತಿ ವಿತರಣೆಯನ್ನು ------

III. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಕಚ್ಚಾ ದತ್ತಾಂಶ ಎಂದರೇನು?
2. ದತ್ತಾಂಶದ ಪರಿಮಾಣಾತ್ಮಕ ವರ್ಗಿಕರಣ ಎಂದರೇನು?
3. ದತ್ತಾಂಶದ ಗುಣಾತ್ಮಕ ವರ್ಗಿಕರಣ ಎಂದರೇನು?
4. ವರ್ಗಮಿತಿಯ ಅರ್ಥವನ್ನು ನೀಡಿ.
5. ಏಕಚಲಕ ಆವೃತ್ತಿ ವಿತರಣೆ ಎಂದರೇನು?
6. ಕಾಲಾನುಕ್ರಮ ವರ್ಗೀಕರಣ ದತ್ತಾಂಶ ಎಂದರೇನು?
7. ಸ್ಥಾನಾನುಸಾರ ವರ್ಗೀಕರಣ ಎಂದರೇನು?

IV. ಕೆಳಗಿನ ಪ್ರಶ್ನೆಗಳಿಗೆ ಸುಮಾರು ನಾಲ್ಕು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕವನ್ನು ಹೊಂದಿರುತ್ತದೆ.)

1. ಚಲಕದ ವಿಧಗಳನ್ನು ತಿಳಿಸಿ.
2. ಹೊರತಾದ ಮತ್ತು ಒಳಗೊಂಡ ಪದ್ಧತಿಯ ನಡುವಿನ ವ್ಯತ್ಯಾಸ ತಿಳಿಸಿ.
3. ದತ್ತಾಂಶದ ವರ್ಗೀಕರಣದ ವಿಧಗಳನ್ನು ಹೆಸರಿಸಿ.
4. ಮಧ್ಯಬಿಂದುವನ್ನು ಹೇಗೆ ಕಂಡುಹಿಡಿಯುವಿರಿ. ಅದರ ಸೂತ್ರ ತಿಳಿಸಿ.
5. ಆವೃತ್ತಿ ಎಂದರೇನು?

V. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕವನ್ನು ಹೊಂದಿರುತ್ತದೆ.)

1. ವರ್ಗೀಕೃತ ದತ್ತಾಂಶದಲ್ಲಿ ಮಾಹಿತಿ ನಶಿಸಿಹೋಗುವಿಕೆ ಎಂದರೇನು?
2. ಸತತ ಮತ್ತು ಅಸತತ ಚಲಕಗಳ ವ್ಯತ್ಯಾಸವನ್ನು ಗುರುತಿಸಿ.
3. ದತ್ತಾಂಶಗಳ ವರ್ಗೀಕರಣದ ಕುರಿತು ಟಿಪ್ಪಣಿ ಬರೆಯಿರಿ.

VI. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಇಪ್ಪತ್ತು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಆರು ಅಂಕವನ್ನು ಹೊಂದಿರುತ್ತದೆ.)

1. ಅರ್ಥಶಾಸ್ತ್ರ ವಿಷಯದಲ್ಲಿ 70 ವಿದ್ಯಾರ್ಥಿಗಳು ಗಳಿಸಿದ ಅಂಕಗಳಿಗೆ ತಾಳೆ ಗುರುತುಗಳ ಸಹಾಯದಿಂದ ಆವೃತ್ತಿ ವಿತರಣೆಯ ಪಟ್ಟಿಯನ್ನು ತಯಾರಿಸಿ.

   28,17,15,22,29,21,23,27,18,12,7,2,9,4,1,8,3,10,5,20,16,12,8,4,33,27,21,15,3,36,27,21,15,3,37,16,28,9,2,4,6,32,31,29,18,14,13,15,11,9,7,1,5,37,32,23,24,20,19,25,19,25,19,25,19,20,6,9,30.

2. ಆವೃತ್ತಿ ವಿತರಣೆಯನ್ನು ತಯಾರಿಸುವಾಗ ಉಂಟಾಗುವ ನಾಲ್ಕು ಪ್ರಶ್ನೆಗಳನ್ನು ಪಟ್ಟಿ ಮಾಡಿ. ಇವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

* * *

ಅಧ್ಯಾಯ-4

ದತ್ತಾಂಶಗಳ ನಿರೂಪಣೆ

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1) ದತ್ತಾಂಶಗಳನ್ನು ವಾಕ್ಯಗಳಲ್ಲಿ ನಿರೂಪಿಸುವುದನ್ನು ಹೀಗೆನ್ನುವರು.

ಎ. ಕೋಷ್ಟಕ ನಿರೂಪಣೆ ಬಿ. ರೇಖಾಚಿತ್ರ ನಿರೂಪಣೆ

ಸಿ. ಪಠ್ಯ ನಿರೂಪಣೆ ಡಿ. ಮೇಲಿನ ಯಾವುದೂ ಅಲ್ಲ

2) ಆಯತ ಚಿತ್ರವು ಒಂದು

ಎ. ಒಂದು ಪರಿಮಾಣದ ಆಕೃತಿ ಬಿ. ಎರಡು ಪರಿಮಾಣದ ಆಕೃತಿ

ಸಿ. ಮೂರು ಪರಿಮಾಣದ ಆಕೃತಿ ಡಿ. ನಾಲ್ಕು ಪರಿಮಾಣದ ಆಕೃತಿ

3) ಆವೃತ್ತಿ ಬಹುಭುಜಾಕೃತಿಯನ್ನು ಈ ನಿರೂಪಣೆಯಲ್ಲಿ ಬಳಸಲಾಗುತ್ತದೆ

ಎ. ಅವರ್ಗೀಕೃತ ದತ್ತಾಂಶ ಬಿ. ವರ್ಗೀಕೃತ ದತ್ತಾಂಶ

ಸಿ. ಎರಡು ರೀತಿಯ ದತ್ತಾಂಶ ಡಿ. ಮೇಲಿನ ಯಾವುದೂ ಅಲ್ಲ

4) ದತ್ತಾಂಶಗಳನ್ನು ಅಡ್ಡಸಾಲು ಮತ್ತು ಕಂಬಸಾಲುಗಳಲ್ಲಿ ವ್ಯಕ್ತಪಡಿಸುವುದನ್ನು ಹೀಗೆನ್ನುತ್ತೇವೆ.

ಎ. ಪೈ–ನಕ್ಷೆ ಬಿ. ಸ್ತಂಭರೇಖೆ

ಸಿ. ಸರಳರೇಖೆ ಡಿ. ಕೋಷ್ಟಕ

5) ಚೂಪು ಛಾವಣಿಗಳು ಇದನ್ನು ರೇಖಾತ್ಮಕವಾಗಿ ನಿರೂಪಿಸಲು ಸಹಾಯಕವಾಗಿವೆ.

ಎ. ಬಹುಲಕ ಬಿ. ಸರಾಸರಿ

ಸಿ. ಮಧ್ಯಾಂಕ ಡಿ. ಮೇಲಿನ ಯಾವುದೂ ಅಲ್ಲ

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1) ಅಂಕಗಣಿತೀಯ ರೇಖಾ ನಕ್ಷೆಯನ್ನು .....ಎಂದೂ ಕರೆಯುವರು

2) ಘಟಕ ಸ್ತಂಭ ರೇಖಾ ಚಿತ್ರವನ್ನು .....ಎಂದು ಕರೆಯುವರು

3) ..... ಭಾಗವು ಕೋಷ್ಟಕದ ನೈಜ ದತ್ತಾಂಶವನ್ನು ಒಳಗೊಂಡಿರುತ್ತದೆ.

III. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1) ಪೈ–ನಕ್ಷೆ ಎಂದರೇನು?

2) ಆವೃತ್ತಿ ಬಹುಭಜಾಕೃತಿ ಎಂದರೇನು?

3) ಬಹುಸ್ತಂಭ ರೇಖಾಚಿತ್ರ ಎಂದರೇನು?

4) ಕೋಷ್ಟಕ ಎಂದರೇನು?

IV. ಕೆಳಗಿನ ಪ್ರಶ್ನೆಗಳಿಗೆ ಸುಮಾರು ನಾಲ್ಕು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕವನ್ನು ಹೊಂದಿರುತ್ತದೆ.)

1. ಕೋಷ್ಟಕ ರೂಪೀಕರಣದ ಯಾವುದಾದರೂ ನಾಲ್ಕು ಭಾಗಗಳನ್ನು ಹೆಸರಿಸಿ.
2. ಸ್ತಂಭ ರೇಖಾ ಚಿತ್ರದ ವಿಧಗಾಳವುವು?
3. ಸಂಘಟಕ ಸ್ಥಂಭ ರೇಖಾಚಿತ್ರ ಎಂದರೇನು? ಉದಾಹರಣೆ ಕೊಡಿ.
4. ಆವೃತ್ತಿ ರೇಖೆಯನ್ನು ಹೇಗೆ ಪಡೆಯುವಿರಿ?
5. ಈ ಕೆಳಗಿನವುಗಳನ್ನು ನಿರೂಪಿಸಲು ಯಾವ ದತ್ತಾಂಶವು ಹೆಚ್ಚು ಸೂಕ್ತವಾಗಿದೆ?

   ಅ) ಒಂದು ವರ್ಷದಲ್ಲಿನ ಪ್ರತಿ ತಿಂಗಳ ಮಳೆ

   ಬ) ದೆಹಲಿಯ ಜನಸಂಖ್ಯೆಯ ಧರ್ಮಾನುಸಾರ ರಚನೆ

V. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕವನ್ನು ಹೊಂದಿರುತ್ತದೆ.)

1) ಒಂದು ಕೋಷ್ಟಕದ ನಮೂನೆಯನ್ನು ಬರೆದು ಅದರ ಭಾಗಗಳನ್ನು ಗುರುತಿಸಿ.

2) ಕೆಳಗಿನ ದತ್ತಾಂಶದ ಸಹಾಯದಿಂದ ಸ್ತಂಭ ರೇಖಾಚಿತ್ರ ರಚಿಸಿ.

ವಿವಿದ ವರ್ಷಗಳಲ್ಲಿ ಒಂದು ಕಂಪನಿಯ ಕಾರುಗಳ ಉತ್ಪಾದನೆ.

ವರ್ಷ	ಕಾರುಗಳ ಸಂಖ್ಯೆ
2011	150
2012	250
2013	180
2014	90
2015	300
2016	350

VI. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಇಪ್ಪತ್ತು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಆರು ಅಂಕವನ್ನು ಹೊಂದಿರುತ್ತದೆ.)

1) ಕೋಷ್ಟಕದ ಭಾಗಗಳನ್ನು ವಿವರಿಸಿ.

2) ಈ ಕೆಳಗಿನ ಕೋಷ್ಟಕವು. ಬಿಹಾರದ ಒಂದು ಜಿಲ್ಲೆಯಲ್ಲಿ 6 ರಿಂದ 14 ವರ್ಷದ ಮಕ್ಕಳ ಲಿಂಗಾನುಸಾರ (%) ದಾಖಲಾತಿಯನ್ನು ತೋರಿಸುತ್ತದೆ. ಇದನ್ನು ಆಧರಿಸಿ ಸಂಘಟಕ ಸ್ತಂಭರೇಖಾ ಚಿತ್ರವನ್ನು ಎಳೆಯಿರಿ.

ಲಿಂಗ	ದಾಖಲಾತಿ(%)	ಶಾಲೆಯಿಂದ ಹೊರಗುಳಿದವರು
ಹುಡುಗರು	91.5	8.5
ಹುಡುಗಿಯರು	58.6	41.4
ಒಟ್ಟು	78.0	22

3) ಚೂಪು ಭಾವಣಿ ರೇಖೆಯನ್ನು ಈ ಕೆಳಗಿನ ದತ್ತಾಂಶಗಳ ಸಹಾಯದಿಂದ ರಚಿಸಿ.

ಅಂಕಗಳು (x)	ವಿದ್ಯಾರ್ಥಿಗಳ ಸಂಖ್ಯೆ (f)
0–20	6
20–40	5
40–60	33
60–80	14
80–100	6
ಒಟ್ಟು	64

4) ಕೆಳಗಿನ ದತ್ತಾಂಶಗಳಿಗೆ ಅಂಕಗಣಿತೀಯ ರೇಖಾಚಿತ್ರವನ್ನು ಬರೆಯಿರಿ.

ಭಾರತದ ಆಮದು ಮತ್ತು ರಫ್ತಿನ ಮೌಲ್ಯಗಳು(100 ಕೋಟಿ ರೂಗಳಲ್ಲಿ)

ವರ್ಷ	ರಫ್ತುಗಳು	ಆಮದುಗಳು
2009–10	8455	13637
2010–11	11370	16835
2011–12	14660	23455
2012–13	16343	26692
2013–14	19050	27154

VII. ಯೋಜನೆ ಆಧಾರಿತ ಪ್ರಶ್ನೆ (5 ಅಂಕಗಳು)

1. ನಿಮ್ಮ ಪ್ರದೇಶದಲ್ಲಿ ಈ ಕೆಳಗೆ ನಮೂದಿಸಿದ ಉದ್ಯೋಗ ಸ್ತರಗಳಲ್ಲಿ ಭಾಗಿಯಾಗಿರುವ ಮಹಿಳೆಯರ ಬಗ್ಗೆ ನೀವು ಸಂಗ್ರಹಿಸಿರುವ ದತ್ತಾಂಶದ ಆಧಾರದ ಮೇಲೆ ಒಂದು ಪೈ ಚಿತ್ರವನ್ನು ರಚಿಸಿ.

ಸ್ಥಾನಮಾನ	ಜನಸಂಖ್ಯೆ
ಅ) ಸೀಮಾಂತ ಕೆಲಸಗಾರ	12
ಬ) ಮುಖ್ಯ ಕೆಲಸಗಾರ	36
ಕ) ಕೆಲಸ ಮಾಡದವರು	73

* * *

ಅಧ್ಯಾಯ– ೮

ಕೇಂದ್ರೀಯ ಪ್ರವೃತ್ತಿಯ ಮಾಪನಗಳು

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಐದು ವಿದ್ಯಾರ್ಥಿಗಳು ಪಡೆದ ಅಂಕಗಳು ಕ್ರಮವಾಗಿ 10, 20, 30, 40 ಮತ್ತು 50 ಆದರೆ ಅಂಕಗಣಿತ ಸರಾಸರಿ ಮೌಲ್ಯವೆಷ್ಟು?

   ಎ. 35 ಬಿ. 30 ಸಿ. 25 ಡಿ. 40

2. $\overline{X} = \frac{\Sigma x}{N}$ ಎಂಬುದು ಯಾವುದಕ್ಕೆ ಸಂಬಂಧಿಸಿದೆ

   ಎ. ಅಂಕಗಣಿತ ಸರಾಸರಿ ಬಿ. ಬಹುಲಕ

   ಸಿ. ಮಧ್ಯಾಂಕ ಡಿ. ಗುಣೋತ್ತರ ಸರಾಸರಿ

3. ಸಾಮಾನ್ಯವಾಗಿ ಅತಿ ಹೆಚ್ಚು ಬಳಕೆಯ ಕೇಂದ್ರೀಯ ಪ್ರವೃತ್ತಿಯ ಮಾಪನವೆಂದರೆ

   ಎ. ಬಹುಲಕ ಬಿ. ಮಧ್ಯಾಂಕ ಸಿ. ಅಂಕಗಣಿತ ಸರಾಸರಿ ಡಿ. ಶತಾಂಕ

4. ಈ ಕೆಳಗಿನವುಗಳಲ್ಲಿ ಯಾವುದು ಮಧ್ಯಾಂಕವನ್ನು ಪ್ರತಿನಿಧಿಸುತ್ತದೆ?

   ಎ. Q_1 ಬಿ. Q_3 ಸಿ. Q_4 ಡಿ. Q_2

5. ಶತಾಂಕಗಳು ವಿತರಣೆಯನ್ನು ಎಷ್ಟು ಸಮಭಾಗಗಳಾಗಿ ವಿಭಾಗಿಸುತ್ತದೆ?

   ಎ. 100 ಬಿ. 75 ಸಿ. 25 ಡಿ. 50

6. ಚತುರ್ಥಕಗಳು ಮಾಪನಗಳಾಗಿದ್ದು ಅದು ದತ್ತಾಂಶವನ್ನು ಎಷ್ಟು ಸಮಭಾಗಗಳಾಗಿ ವಿಂಗಡಿಸುತ್ತದೆ?

   ಎ. 2 ಬಿ. 4 ಸಿ. 1 ಡಿ. 3

7. ವಿವಿಧ ಅಂಶಗಳಿಗೆ ಅವುಗಳ ಮಹತ್ವದನುಸಾರ ತೂಕವನ್ನು ನಿಯೋಜಿಸಿದಾಗ ಅದನ್ನು ಏನೆಂದು ಕರೆಯುತ್ತಾರೆ?

   ಎ. ಅಂಕಗಣಿತ ಸರಾಸರಿ ಬಿ. ಮಧ್ಯಾಂಕ ಸಿ. ತೂಕಿತ ಅಂಕಗಣಿತ ಸರಾಸರಿ ಡಿ. ಬಹುಲಕ

8. ಐದು ಜನ ಕೂಲಿ ಕಾರ್ಮಿಕರ ಕೂಲಿಯು 10, 20, 30, 35 ಮತ್ತು 38 ಆದರೆ ಅವರುಗಳ ಮಧ್ಯಾಂಕದ ಕೂಲಿ ಏನು?

   ಎ. ರೂ. 20 ಬಿ. ರೂ. 10 ಸಿ. ರೂ. 35 ಡಿ. ರೂ. 30

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ..... ಅಂಕಗಣಿತ ಸರಾಸರಿಯು ಪ್ರತಿಯೊಂದು ಅಂಶಗಳಿಗೂ ಸಾಪೇಕ್ಷ ಮಹತ್ವವನ್ನು ನೀಡುತ್ತದೆ.
2. ಮೂರನೇ ಚತುರ್ಥಕ ಮತ್ತು ..... ಶತಾಂಕ ಒಂದೇ ಆಗಿವೆ.
3. ಒಂದು ಶ್ರೇಣಿಯಲ್ಲಿ ..... ಚತುರ್ಥಕಗಳು ಇರುತ್ತವೆ.
4. ..... ಅತಿರಿಕ್ತ ಮೌಲ್ಯಾಂಕಗಳಿಂದ ಪ್ರಭಾವಕ್ಕೆ ಒಳಗಾಗುವುದಿಲ್ಲ.

5. ಶ್ರೇಣಿಯೊಂದರಲ್ಲಿ ಹೆಚ್ಚು ಬಾರಿ ಪುನರಾವರ್ತನೆಯಾಗುವ ಪ್ರಾಪ್ತಾಂಕದ ಮೌಲ್ಯವನ್ನು ..... ಎಂದು ಕರೆಯುತ್ತಾರೆ.

6. ವಿತರಣೆಯೊಂದು ಎರಡಕ್ಕಿಂತ ಹೆಚ್ಚು ಬಹುಲಕಗಳನ್ನು ಹೊಂದಿದ್ದರೆ ಅದನ್ನು ..... ಎಂದು ಕರೆಯುತ್ತಾರೆ.

III. ಹೊಂದಿಸಿ ಬರೆಯಿರಿ.

ಎ	ಬಿ
1) ಅಂಕಗಣಿತ ಸರಾಸರಿ	1) ಸ್ಥಾನಿಕ ಮೌಲ್ಯಗಳು
2) ಮಧ್ಯಾಂಕ	2) $\overline{X}$
3) ΣN	3) Q_3
4) Q_1, Q_2, P_{25}, P_{50}	4) ಪ್ರಾಪ್ತಾಂಕಗಳ ಒಟ್ಟು ಸಂಖ್ಯೆ
5) 3 $\frac{(N+1)}{4}$	5) ವಿಭಾಜಕ ಮೌಲ್ಯಗಳು

IV. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಕೇಂದ್ರೀಯ ಪ್ರವೃತ್ತಿ ಎಂದರೇನು?
2. ಅಂಕಗಣಿತ ಸರಾಸರಿ ಎಂದರೇನು?
3. ಮಧ್ಯಾಂಕ ಎಂದರೇನು?
4. ಎಂಟು ಜನ ವಿದ್ಯಾರ್ಥಿಗಳ ಜೇಬಿನಲ್ಲಿರುವ ಹಣವನ್ನು ಈ ಕೆಳಗೆ ನೀಡಲಾಗಿದೆ.

   5, 6, 12, 18, 24, 30, 36, 42 ಮತ್ತು 48 ಆದರೆ ಅಂಕಗಣಿತ ಸರಾಸರಿಯನ್ನು ಕಂಡುಹಿಡಿಯಿರಿ.
5. ತೂಕಿತ ಅಂಕಗಣಿತ ಸರಾಸರಿಯನ್ನು ಕಂಡುಹಿಡಿಯುವ ಸೂತ್ರವನ್ನು ಬರೆಯಿರಿ.
6. ಶತಾಂಕಗಳು ಎಂದರೇನು?
7. ದ್ವಿ ಬಹುಲಕ ಎಂದರೇನು?
8. ಈ ಕೆಳಗಿನ ದತ್ತಾಂಶಗಳಿಗೆ ಬಹುಲಕವನ್ನು (ರೂಢಿಬೆಲೆ) ಕಂಡುಹಿಡಿಯಿರಿ.

   X : 10, 8, 10, 6, 4, 12, 10, 8, 10, 18, 16, 10, 18, 16

V. ಕೆಳಗಿನ ಪ್ರಶ್ನೆಗಳಿಗೆ ಸುಮಾರು ನಾಲ್ಕು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕವನ್ನು ಹೊಂದಿರುತ್ತದೆ.)

1. ಕೇಂದ್ರೀಯ ಪ್ರವೃತ್ತಿ ಮಾಪನಗಳ ವಿಧಗಳಾವುವು?
2. ಈ ಕೆಳಗಿನ ಮಾಹಿತಿಗೆ ಅಂಕಗಣಿತ ಸರಾಸರಿಯನ್ನು ಕಂಡುಹಿಡಿಯಿರಿ.

   10 ಜನ ವಿದ್ಯಾರ್ಥಿಗಳು ಪಡೆದಿರುವ ಅಂಕಗಳು 30, 62, 47, 25, 52, 39, 56, 66, 12, 24

3. ಈ ಕೆಳಗಿನ ದತ್ತಾಂಶಗಳಿಗೆ ಮಧ್ಯಾಂಕವನ್ನು ಕಂಡುಹಿಡಿಯಿರಿ.

   X : 5, 7, 9, 12, 11, 8, 7, 15, 25

4. ಬಹುಲಕದ ವಿಧಗಳನ್ನು ಹೆಸರಿಸಿ.

5. ಬಹುಲಕ ಎಂದರೇನು? ನಿರಂತರ ಶ್ರೇಣಿಯಲ್ಲಿ ಬಹುಲಕವನ್ನು ಕಂಡುಹಿಡಿಯಲು ಬಳಸುವ ಸೂತ್ರವನ್ನು ಬರೆಯಿರಿ.

VI. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕವನ್ನು ಹೊಂದಿರುತ್ತದೆ.)

1. ಈ ಕೆಳಗಿನ ವಿಧಾನಗಳನ್ನು ಬಳಸಿ ಅಂಕಗಣಿತ ಸರಾಸರಿಯನ್ನು ಕಂಡುಹಿಡಿಯಿರಿ.

   ಎ) ನೇರ ವಿಧಾನ ಬಿ) ಊಹಾತ್ಮಕ ಸರಾಸರಿ ವಿಧಾನ

X	5	10	15	20	25	30	35	40
f	5	7	9	10	8	6	5	2

2. ತೂಕಿತ ಅಂಕಗಣಿತವನ್ನು ವ್ಯಾಖ್ಯಾನಿಸಿ. ಅದನ್ನು ಹೇಗೆ ಕಂಡುಹಿಡಿಯಲಾಗುತ್ತದೆಂಬುದನ್ನು ವಿವರಿಸಿ.

3. ಸಂಖ್ಯಾತ್ಮಕ ಸರಾಸರಿಗಳಲ್ಲಿ ಯಾವುದಾದರೂ 3 ಸರಾಸರಿಗಳನ್ನು ಹೆಸರಿಸಿ ಮತ್ತು ವ್ಯಾಖ್ಯಾನಿಸಿ.

4. ಈ ಕೆಳಗಿನ ದತ್ತಾಂಶಗಳಿಗೆ ಮಧ್ಯಾಂಕವನ್ನು ಕಂಡುಹಿಡಿಯಿರಿ.

ತೂಕ	40	50	60	70	80	90
ವ್ಯಕ್ತಿಗಳ ಸಂಖ್ಯೆ	3	17	24	16	8	2

5. ಈ ಕೆಳಗಿನ ದತ್ತಾಂಶಗಳಿಗೆ ಕೆಳಗಿನ ಚತುರ್ಥಕವನ್ನು ಕಂಡುಹಿಡಿಯಿರಿ.

   X : 22, 26, 14, 30, 18, 11, 35, 41, 12, 32

VII. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಇಪ್ಪತ್ತು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಆರು ಅಂಕವನ್ನು ಹೊಂದಿರುತ್ತದೆ.)

1. ಈ ಕೆಳಕಂಡ ದತ್ತಾಂಶಗಳಿಗೆ ನೇರ ವಿಧಾನ, ಊಹಾತ್ಮಕ ವಿಧಾನ ಮತ್ತು ಹಂತ ವಿಚಲನಾ ವಿಧಾನಗಳ ಮೂಲಕ ಅಂಕಗಣಿತ ಸರಾಸರಿಯನ್ನು ಕಂಡುಹಿಡಿಯಿರಿ.

   40, 50, 55, 78, 58

2. ಈ ಕೆಳಕಂಡ ದತ್ತಾಂಶಗಳನ್ನು ಉಪಯೋಗಿಸಿಕೊಂಡು ಎ) ನೇರ ವಿಧಾನ ಬಿ) ಹಂತ ವಿಚಲನಾ ವಿಧಾನಗಳ ಮೂಲಕ ವಿದ್ಯಾರ್ಥಿಗಳ ಸರಾಸರಿ ಅಂಕಗಳನ್ನು ಕಂಡುಹಿಡಿಯಿರಿ.

ಅಂಕಗಳು	0–10	10–20	20–30	30–40	40–50	50–60	60–70
ವಿದ್ಯಾರ್ಥಿಗಳ ಸಂಖ್ಯೆ	5	12	15	25	8	3	2

3. ಈ ಕೆಳಗಿನ ದತ್ತಾಂಶಗಳಿಗೆ ಮಧ್ಯಾಂಕವನ್ನು ಕಂಡುಹಿಡಿಯಿರಿ.

ಕೂಲಿ (ರೂಗಳಲ್ಲಿ)	60–70	50–60	40–50	30–40	20–30
ವ್ಯಕ್ತಿಗಳ ಸಂಖ್ಯೆ	7	21	11	6	5

4. ಈ ಕೆಳಗಿನ ದತ್ತಾಂಶಗಳಿಗೆ Q_1, Q_2 (ಮಧ್ಯಾಂಕ) ಮತ್ತು Q_3 ಗಳನ್ನು ಕಂಡುಹಿಡಿಯಿರಿ.

   15, 21, 26, 30, 40, 45, 50, 54, 60, 65, 70

5. ಈ ಕೆಳಗಿನ ದತ್ತಾಂಶಗಳಿಗೆ Q_1, Q_2 ಮತ್ತು Q_3 ಗಳನ್ನು ಕಂಡುಹಿಡಿಯಿರಿ.

   X : 22, 26, 14, 30, 18, 11, 35, 41, 12, 32

6. ಈ ಕೆಳಗಿನ ದತ್ತಾಂಶಗಳಿಂದ ಬಹುಲಕ ಕಾರ್ಮಿಕ ಕುಟುಂಬಗಳ ಮಾಸಿಕ ಆದಾಯವನ್ನು ಲೆಕ್ಕಾಚಾರ ಮಾಡಿ.

ಪ್ರತಿ ತಿಂಗಳ ಆದಾಯ (*000 ಗಳಲ್ಲಿ	ಸಂಚಿತ ಆವೃತ್ತಿ
50 ಕ್ಕಿಂತ ಕಡಿಮೆ	97
45 ಕ್ಕಿಂತ ಕಡಿಮೆ	95
40 ಕ್ಕಿಂತ ಕಡಿಮೆ	90
35 ಕ್ಕಿಂತ ಕಡಿಮೆ	80
30 ಕ್ಕಿಂತ ಕಡಿಮೆ	60
25 ಕ್ಕಿಂತ ಕಡಿಮೆ	30
20 ಕ್ಕಿಂತ ಕಡಿಮೆ	12
15 ಕ್ಕಿಂತ ಕಡಿಮೆ	4

VIII. ಯೋಜನೆ ಆಧಾರಿತ ಪ್ರಶ್ನೆ (5 ಅಂಕಗಳು)

1. ಒಂದು ದಿನದಲ್ಲಿ ಪ್ರತೀ ಎರಡು ತಾಸುಗಳಿಗೆ ಒಮ್ಮೆ, ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ಕೆಳಗೆ ದಾಖಲಿಸಿದ ತಾಪಮಾನದಿಂದ ಸರಾಸರಿ ತಾಪಮಾನ ಮತ್ತು ವ್ಯಾಪ್ತಿಯನ್ನು ಕಂಡು ಹಿಡಿಯಿರಿ.

ಗಂಟೆ	ತಾಪಮಾನ
6–8	18
8–10	24
10–12	26
12–14	29
14–16	30
16–18	25

* * *

ಅಧ್ಯಾಯ– 6

ಹರಡಿನ ಅಳತೆಗಳು

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಅಂತರ ಚತುರ್ಥಕ ವ್ಯಾಪ್ತಿಯು ವಿತರಣೆಯ ಮಧ್ಯಭಾಗದಲ್ಲಿರುವ ಈ ಮೌಲ್ಯವನ್ನು ಅವಲಂಬಿಸಿದೆ.

   ಎ. 30% ಬಿ. 20% ಸಿ. 50% ಡಿ. 25%

2. ಚತುರ್ಥಕ ವಿಚಲನೆಗಾಗಿ ನಾವು Q_3 ಯೊಂದಿಗೆ ಈ ಮೌಲ್ಯವನ್ನು ಲೆಕ್ಕ ಮಾಡಬೇಕಾಗುತ್ತದೆ.

   ಎ. Q_2 ಬಿ. Q_4 ಸಿ. Q_1 ಡಿ Q_0

3. ವ್ಯಾಪ್ತಿಯ ಗುಣಾಂಕ =

   ಎ. $\frac{L-S}{L+S}$ ಬಿ. $\frac{R-L}{R+L}$

   ಸಿ. $\frac{L+S}{L-S}$ ಡಿ. ಮೇಲಿನ ಯಾವುದೂ ಅಲ್ಲ

4. ಹರವಿನ ಅಳತೆಗಳ ರೇಖಾತ್ಮಕ ಮಾಪನವನ್ನು ಹೀಗೆ ಕರೆಯುತ್ತೇವೆ.

   ಎ. ಲಾರೆಂಜ್ ವಕ್ರರೇಖೆ ಬಿ. ಮಾರ್ಷಲ್ ವಕ್ರರೇಖೆ

   ಸಿ. ಉತ್ಪಾದಕ ವಕ್ರರೇಖೆ ಡಿ. ಮೇಲಿನ ಯಾವುದೂ ಅಲ್ಲ.

5. ಅಂಕಗಣಿತ ಸರಾಸರಿಯಿಂದ ಮಾತ್ರ ಲೆಕ್ಕ ಹಾಕುವ ವಿಚಲನೆ.

   ಎ. ಚತುರ್ಥಕ ವಿಚಲನೆ ಬಿ. ಮಾನಕ ವಿಚಲನೆ

   ಸಿ. ವ್ಯಾಪ್ತಿ ಡಿ. ಮೇಲಿನ ಯಾವುದೂ ಅಲ್ಲ

II. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಹರವು ಎಂದರೇನು?
2. ವ್ಯಾಪ್ತಿ ಮತ್ತು ಚತುರ್ಥಕ ವಿಚಲನೆಗಳನ್ನು ಹರವನ್ನು ಹೇಗೆ ಅಳತೆ ಮಾಡುತ್ತದೆ?
3. ಸರಾಸರಿ ಮತ್ತು ಮಾನಕ ವಿಚಲನೆಗಳನ್ನು ಹರವನ್ನು ಹೇಗೆ ಅಳತೆ ಮಾಡುತ್ತದೆ?
4. ಮಾನಕ ವಿಚಲನೆಯ ಅರ್ಥ ತಿಳಿಸಿ.
5. ಸರಾಸರಿ ವಿಚಲನೆ ಎಂದರೇನು?

III. ಕೆಳಗಿನ ಪ್ರಶ್ನೆಗಳಿಗೆ ಸುಮಾರು ನಾಲ್ಕು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕವನ್ನು ಹೊಂದಿರುತ್ತದೆ.)

1. ಅಂತರ ಚತುರ್ಥಕ ವ್ಯಾಪ್ತಿಯನ್ನು ಲೆಕ್ಕಾಚಾರ ಮಾಡಲು ಯಾವ ಚತುರ್ಥಕಗಳನ್ನು ಬಳಸಲಾಗುತ್ತದೆ. ಅದರ ಸೂತ್ರವನ್ನು ತಿಳಿಸಿ.

2. ಮಾನಕ ವಿಚಲನೆ ಎಂದರೇನು? ಅದರ ಊಹಾತ್ಮಕ ಸರಾಸರಿ ವಿಧಾನದ ಸೂತ್ರವನ್ನು ಬರೆಯಿರಿ.

3. ಹರವಿನ ಅಳತೆಗಳ ವಿವಿಧ ಮಾಪನಗಳನ್ನು ತಿಳಿಸಿ.

IV. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕವನ್ನು ಹೊಂದಿರುತ್ತದೆ.)

1. ಒಂದು ರಾಜ್ಯದ 10 ಜಿಲ್ಲೆಗಳಲ್ಲಿ ಪ್ರತಿ ಎಕರೆಯ ಜೋಳದ ಉತ್ಪಾದನೆ (ಟನ್‌ಗಳಲ್ಲಿ) ಈ ಕೆಳಗಿನಂತಿದೆ

ಜಿಲ್ಲೆ	A	B	C	D	E	F	G	H	I	J
ಜೋಳ	22	29	12	23	18	15	12	34	18	12

ಅಂಕ ಗಣಿತ ಸರಾಸರಿಯಿಂದ ಸರಾಸರಿ ವಿಚಲನೆಯನ್ನು ಕಂಡು ಹಿಡಿಯಿರಿ

2. ಒಂದು ರಾಜ್ಯದ 10 ಜಿಲ್ಲೆಗಳಲ್ಲಿ ಪ್ರತಿ ಎಕರೆಯ ಅಕ್ಕಿ ಉತ್ಪಾದನೆ (ಟನ್‌ಗಳಲ್ಲಿ) ಈ ಕೆಳಗಿನಂತಿದೆ

ಜಿಲ್ಲೆ	A	B	C	D	E	F	G	H	I	J
ಅಕ್ಕಿ	23	18	12	22	29	12	34	18	12	15

ಮಧ್ಯಾಂಕದಿಂದ ಸರಾಸರಿ ವಿಚಲನೆಯನ್ನು ಲೆಕ್ಕ ಮಾಡಿ

3. ಈ ಕೆಳಗಿನ ವಿತರಣೆಗೆ, ಅಂಕಗಣಿತ ಸರಾಸರಿಯನ್ನು ಉಪಯೋಗಿಸಿ ಸರಾಸರಿ ವಿಚಲನೆಯನ್ನು ಲೆಕ್ಕ ಮಾಡಿ

ವರ್ಗಗಳು	ಆವೃತ್ತಿಗಳು
20–40	3
40–80	6
80–100	20
100–120	12
120–140	9
	50

4. ಈ ಕೆಳಗಿನ ದತ್ತಾಂಶಗಳಿಗೆ Q.D ಮತ್ತು ಅದರ ಸಹಗುಣಕವನ್ನು ಲೆಕ್ಕ ಮಾಡಿ.

78, 80, 80, 82, 82, 84, 84, 86, 86, 88, 88, 90

5. ಈ ಕೆಳಗಿನ ವಿವರಣೆಗೆ ಅಂಕಗಣಿಕ ಸರಾಸರಿಯಿಂದ ಸರಾಸರಿ ವಿಚಲನೆಯನ್ನು ಕಂಡುಹಿಡಿಯಿರಿ

ಎತ್ತರ (ಇಂಚುಗಳಲ್ಲಿ)	60	61	62	63	64	65	66	67	68
ಜನರ ಸಂಖ್ಯೆ	2	1	14	29	25	12	10	4	2

6. ಈ ಕೆಳಗಿನ ಆವೃತ್ತಿ ವಿತರಣೆಗೆ ಮಧ್ಯಾಂಕದಿಂದ ಸರಾಸರಿ ವಿಚಲನೆಯ ಗುಣಾಂಕವನ್ನು ಲೆಕ್ಕ ಮಾಡಿ.

X	5	6	7	8	9	10
f	8	12	18	8	2	1

7. ಈ ಕೆಳಗಿನ ದತ್ತಾಂಶಗಳಿಗೆ ಮಾನಕ ವಿಚಲನೆಯನ್ನು ಕಂಡುಹಿಡಿಯಿರಿ.

8, 9, 15, 23, 5, 11, 19, 8, 10, 12

V. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಇಪ್ಪತ್ತು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಆರು ಅಂಕವನ್ನು ಹೊಂದಿರುತ್ತದೆ.)

1. ಒಂದು ರಾಜ್ಯದ 10 ಜಿಲ್ಲೆಗಳಲ್ಲಿ ಪ್ರತಿ ಎಕರೆಗೆ ಕಬ್ಬಿನ ಉತ್ಪಾದನೆ (ಟನ್‌ಗಳಲ್ಲಿ) ಈ ಕೆಳಗಿನಂತಿದೆ.

ಜಿಲ್ಲೆ	A	B	C	D	E	F	G	H	I	J
ಕಬ್ಬು	12	10	15	19	21	16	18	9	25	10

ಮಾನಕ ವಿಚಲನೆ ಮತ್ತು ಮಾರ್ಪಿನ ಗುಣಾಂಕ (C.V) ಯನ್ನು ಲೆಕ್ಕ ಮಾಡಿ

2. ಈ ಕೆಳಗಿನ ವಿತರಣೆಗೆ ಮಾನಕ ವಿಚಲನೆಯನ್ನು ಲೆಕ್ಕ ಮಾಡಿ

ವರ್ಗಗಳು	ಆವೃತ್ತಿಗಳು
0–20	9
20–40	12
40–60	20
60–80	6
80–100	3

3. ಈ ಕೆಳಗಿನ ವಿತರಣೆಗೆ ಚತುರ್ಥಕ ವಿಚಲನೆಯ ಗುಣಾಂಕವನ್ನು ಲೆಕ್ಕ ಮಾಡಿ

ವೇತನ (ರೂಗಳಲ್ಲಿ)	60–64	64–68	68–72	72–76	76–80	80–84	84–88
ಕಾರ್ಮಿಕರ ಸಂಖ್ಯೆ	12	18	16	14	12	8	8

4. ಈ ಕೆಳಗಿನ ವಿತರಣೆಗೆ ವಿಚಲನಾ ವಿಧಾನದಿಂದ ಮಾನಕ ವಿಚಲನೆ ಮತ್ತು ಪ್ರಸರಣ ವಿಚಲನೆಯನ್ನು ಲೆಕ್ಕ ಮಾಡಿ

X	8	11	17	20	25	30	35
f	2	3	4	1	5	7	3

* * *

ಅಧ್ಯಾಯ– 7

ಸಹ ಸಂಬಂಧ

I. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಸಹಸಂಬಂಧ ಎಂದರೇನು?
2. ಚದರಿಕೆಯ ಚಿತ್ರ ಎಂದರೇನು?
3. ಸ್ಪಿಯರಮನ್ ರವರ ಶ್ರೇಣಿ ಸಹಸಂಬಂಧದ ಸೂತ್ರವನ್ನು ಬರೆಯಿರಿ

II. ಕೆಳಗಿನ ಪ್ರಶ್ನೆಗಳಿಗೆ ಸುಮಾರು ನಾಲ್ಕು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕವನ್ನು ಹೊಂದಿರುತ್ತದೆ.)

1. ಸಹ ಸಂಬಂಧದ ವಿಧಗಳನ್ನು ಹೆಸರಿಸಿರಿ
2. ಋಣಾತ್ಮಕ ಸಹ ಸಂಬಂಧ ಎಂದರೇನು? ಒಂದು ಉದಾಹರಣೆ ಕೊಡಿ
3. ಧನಾತ್ಮಕ ಸಹ ಸಂಬಂಧ ಎಂದರೇನು? ಒಂದು ಉದಾಹರಣೆ ಕೊಡಿ
4. ಕೆಳಗಿನವುಗಳಲ್ಲಿ ಯಾವ ರೀತಿಯ ಸಹ ಸಂಬಂಧವಿದೆ?

   ಎ) ತರಕಾರಿ ಉತ್ಪಾದನೆ ಮತ್ತು ಬೆಲೆ ಬಿ) ತಾಪಮಾನ ಮತ್ತು ಐಸ್‌ಕ್ರೀಗಳ ಮಾರಾಟ
5. r ನ ಬೆಲೆ 1, –1 ಮತ್ತು 0 ಆದಾಗ ಅದರ ಅರ್ಥವನ್ನು ತಿಳಿಸಿ.

III. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕವನ್ನು ಹೊಂದಿರುತ್ತದೆ.)

1. ತಂದೆಯವರುಗಳ ಎತ್ತರಗಳ(x) ಮತ್ತು ಗಂಡುಮಕ್ಕಳ ಎತ್ತರಗಳ (y) (ಇಂಚುಗಳಲ್ಲಿ) ನಡುವಿನ ಸಹಸಂಬಂಧವನ್ನು ಲೆಕ್ಕಮಾಡಿ

X	65	66	57	67	68	69	70	72
Y	67	56	65	68	72	72	69	71

2. X ಮತ್ತು Y ಗಳ ನಡುವಿನ ಸಹಸಂಬಂಧ ಗುಣಾಂಕವನ್ನು ಲೆಕ್ಕ ಮಾಡಿ ಮತ್ತು ಅವುಗಳ ನಡುವಿರುವ ಸಂಬಂಧವನ್ನು ವಿಶ್ಲೇಷಿಸಿ

X	1	3	4	5	7	8
Y	2	6	8	10	14	16

3. ಸಹ ಸಂಬಂಧ ಗುಣಾಂಕದ ಲಕ್ಷಣಗಳನ್ನು ಬರೆಯಿರಿ. (ಯಾವುದಾದರೂ ನಾಲ್ಕು)
4. ಚದರಿಕೆಯ ಚಿತ್ರ ಬಿಡಿಸಿರಿ ಮತ್ತು ಸಹಸಂಬಂಧವನ್ನು ನಿರ್ಣಯಿಸಿ

X	10	20	30	40	50	60	70	80
Y	25	20	25	35	40	35	50	45

5. ಚದರಿಕೆಯ ಚಿತ್ರ ಬಿಡಿಸಿರಿ.

X	1	2	3	4	5	6
Y	2	4	6	8	10	1

IV. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಇಪ್ಪತ್ತು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಆರು ಅಂಕವನ್ನು ಹೊಂದಿರುತ್ತದೆ.)

1. ಈ ಕೆಳಗಿನ ದತ್ತಾಂಶಗಳಿಗೆ ಹಂತ ವಿಚಲನಾ ವಿಧಾನದಿಂದ ಕಾರ್ಲ್‌ಪಿಯರ್‌ಸನ್‌ರವರ ಸಹ ಸಂಬಂಧ ಗುಣಾಂಕವನ್ನು ಲೆಕ್ಕ ಮಾಡಿ ಮತ್ತು ಫಲಿತಾಂಶವನ್ನು ಟೀಕಿಸಿ.

X	12	14	16	18	20	22	24	28	30
Y	36	33	30	27	24	21	18	15	12

2. ಶ್ರೇಣಿ ಸಹ ಸಂಬಂಧದ ಗುಣಾಂಕವನ್ನು ಲೆಕ್ಕಾಚಾರ ಮಾಡಿ.

X	18	28	35	44	35	26	37	48
Y	83	51	34	34	34	28	46	47

* * *

ಅಧ್ಯಾಯ– 8

ಸೂಚ್ಯಾಂಕಗಳು

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. $P_{01} = \frac{\Sigma P_1 q_0}{\Sigma P_0 P_0} \times 100$ ಸಮೀಕರಣವನ್ನು ನೀಡಿದವರು

   ಎ. ಲಾಸ್ಪೆಯರ್ ಬಿ. ಪಾಶ್ಚೆ ಸಿ. ಮಾರ್ಷಲ್ ಡಿ. ಫಿಶರ್

2. ಸೂಚ್ಯಾಂಕದಲ್ಲಿ ಯಾವ ವರ್ಷದ ಬೆಲೆಯನ್ನು 100 ಎಂದು ಊಹಿಸಲಾಗುತ್ತದೆ.

   ಎ. ಚಾಲ್ತಿ ವರ್ಷ ಬಿ. ಆಧಾರ ವರ್ಷ

   ಸಿ. ಬೆಲೆಗಳ ಆಯ್ಕೆ ಡಿ. ಈ ಮೇಲಿನವುಗಳಲ್ಲಿ ಯಾವುದೂ ಇಲ್ಲ

3. ಲಾಸ್ಪೆಯರ್ ಸೂಚ್ಯಾಂಕವು ಈ ಕೆಳಗಿನವುಗಳಲ್ಲಿ ಯಾವುದನ್ನು ಆಧರಿಸಿದೆ?

   ಎ. ಆಧಾರ ವರ್ಷದ ಪ್ರಮಾಣ ಬಿ. ಚಾಲ್ತಿ ವರ್ಷದ ಪ್ರಮಾಣ

   ಸಿ. ಈ ಮೇಲಿನ ಎರಡೂ ಡಿ. ಚಾಲ್ತಿ ಮತ್ತು ಮೂಲ ವರ್ಷದ ಸರಾಸರಿ

4. ಪಾಶ್ಚೆಯವರ ಸೂಚ್ಯಾಂಕವು ಈ ಕೆಳಗಿನವುಗಳಲ್ಲಿ ಯಾವುದನ್ನು ಆಧರಿಸಿದೆ.

   ಎ. ಚಾಲ್ತಿ ವರ್ಷದ ಪ್ರಮಾಣ ಬಿ. ಆಧಾರ ವರ್ಷದ ಪ್ರಮಾಣ

   ಸಿ. ಎರಡೂ ಡಿ. ಯಾವುದೂ ಇಲ್ಲ

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಸೂಚ್ಯಾಂಕಗಳನ್ನು ..... ರಲ್ಲಿ ವ್ಯಕ್ತಪಡಿಸಲಾಗುತ್ತದೆ.
2. ಹಣದುಬ್ಬರವು ಜನಸಾಮಾನ್ಯರ ..... ಮೇಲೆ ಪ್ರಭಾವ ಬೀರುತ್ತದೆ.
3. ಚಾಲ್ತಿ ವರ್ಷದ ಪ್ರಮಾಣವನ್ನು ತೂಕವನ್ನಾಗಿ ಪರಿಗಣಿಸುವ ಸೂಚ್ಯಾಂಕವನ್ನು ..... ಎಂದು ಕರೆಯಲಾಗುತ್ತದೆ.
4. P_1 ಮತ್ತು P_0 ಸರಕುಗಳ ಚಾಲ್ತಿ ಮತ್ತು ..... ಅವಧಿಯ (ವರ್ಷ) ಬೆಲೆಯನ್ನು ಕ್ರಮವಾಗಿ ಸೂಚಿಸುತ್ತದೆ.

III. ಹೊಂದಿಸಿ ಬರೆಯಿರಿ : (5 ಅಂಕಗಳು)

ಎ	ಬಿ
1) CPI	1) ಉತ್ಪಾದಕರ ಬೆಲೆ ಸೂಚ್ಯಾಂಕ
2) WPI	2) ಕೃಷಿ ಬೆಲೆ ಸೂಚ್ಯಾಂಕ
3) IPI	3) ಅನುಭೋಗಿ ಬೆಲೆ ಸೂಚ್ಯಾಂಕ
4) API	4) ಸಗಟು ಬೆಲೆ ಸೂಚ್ಯಾಂಕ
5) PPI	5) ಕೈಗಾರಿಕಾ ಉತ್ಪಾದನಾ ಸೂಚ್ಯಾಂಕ

IV. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಸೂಚ್ಯಾಂಕ ಎಂದರೇನು?
2. ಸಾಪೇಕ್ಷ ಬೆಲೆ ಎಂದರೇನು?
3. ಹಣದುಬ್ಬರ ಎಂದರೇನು?
4. ಕೈಗಾರಿಕಾ ಉತ್ಪಾದನಾ ಸೂಚ್ಯಾಂಕವನ್ನು ಲೆಕ್ಕಾಚಾರ ಮಾಡುವ ಸೂತ್ರವನ್ನು ಬರೆಯಿರಿ.
5. ಸೆನ್ಸೆಕ್ಸ್ (ಸಂವೇದಿ ಸೂಚ್ಯಾಂಕ) ಎಂದರೇನು?

V. ಕೆಳಗಿನ ಪ್ರಶ್ನೆಗಳಿಗೆ ಸುಮಾರು ನಾಲ್ಕು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕವನ್ನು ಹೊಂದಿರುತ್ತದೆ.)

1. ಪ್ರಮುಖ ಸೂಚ್ಯಾಂಕಗಳನ್ನು ಹೆಸರಿಸಿ.
2. ಅನುಭೋಗಿ ಬೆಲೆ ಸೂಚ್ಯಾಂಕ ಎಂದರೇನು? ಅದನ್ನು ನೀವು ಹೇಗೆ ಕಂಡುಹಿಡಿಯುವಿರಿ?
3. ಸಗಟು ಬೆಲೆ ಸೂಚ್ಯಾಂಕ ಎಂದರೇನು? ಅದರ ನ್ಯೂನ್ಯತೆಗಳನ್ನು ಬರೆಯಿರಿ.
4. ಕೈಗಾರಿಕಾ ಉತ್ಪಾದನಾ ಸೂಚ್ಯಾಂಕ ಎಂದರೇನು? ಈ ಸೂಚ್ಯಾಂಕಕ್ಕೆ ಭಾರತದಲ್ಲಿ ಯಾವ ವರ್ಷ ಆಧಾರ ವರ್ಷವಾಗಿದೆ?

VI. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕವನ್ನು ಹೊಂದಿರುತ್ತದೆ.)

1. ಈ ಕೆಳಗಿನ ದತ್ತಾಂಶಗಳಿಗೆ ಸಾಪೇಕ್ಷ ಬೆಲೆಗಳ ತೂಕಿತ ಸರಾಸರಿ ಸೂಚ್ಯಾಂಕವನ್ನು ಕಂಡುಹಿಡಿಯಿರಿ.

ವಸ್ತುಗಳು	ತೂಕ % ರಲ್ಲಿ	ಆಧಾರ ವರ್ಷದ ಬೆಲೆ ರೂಗಳಲ್ಲಿ	ಚಾಲ್ತಿ ವರ್ಷದ ಬೆಲೆ ರೂಗಳಲ್ಲಿ
A	40	2	4
B	30	5	6
C	20	4	5
D	10	2	3

2. ಈ ಕೆಳಗಿನ ದತ್ತಾಂಶಗಳಿಗೆ ಜೀವನ ವೆಚ್ಚದ ಸೂಚ್ಯಾಂಕವನ್ನು ಕಂಡುಹಿಡಿಯಿರಿ.

ವಸ್ತುಗಳು	Q_0	P_0	P_1
ಗೋಧಿ	20	10	12
ಅಕ್ಕಿ	5	30	35
ತುಪ್ಪ	2	20	30
ಸಕ್ಕರೆ	4	25	40

3. ಈ ಕೆಳಗಿನ ದತ್ತಾಂಶಗಳಿಗೆ ಲಾಸ್ಪೆಯರ್ ವಿಧಾನದ ಮೂಲಕ ಸೂಚ್ಯಾಂಕವನ್ನು ಕಂಡುಹಿಡಿಯಿರಿ.

ವಸ್ತುಗಳು	P_0	Q_0	P_1	Q_1
A	8.0	5	10	11
B	8.5	6	9	9
C	9.0	4	12	6

VII. ಕೆಳಗಿನ ಪ್ರಶ್ನೆಗಳಿಗೆ ಸುಮಾರು ಇಪ್ಪತ್ತು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಆರು ಅಂಕವನ್ನು ಹೊಂದಿರುತ್ತದೆ.)

1. ಅನುಭೋಗಿ ಬೆಲೆ ಸೂಚ್ಯಾಂಕವನ್ನು ರಚಿಸುವಾಗ ಕಂಡು ಬರುವ ತೊಂದರೆಗಳನ್ನು ವಿವರಿಸಿ.
2. CPI, WPI, ಮತ್ತು IIP ಗಳ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.
3. ಈ ಕೆಳಗಿನ ದತ್ತಾಂಶಗಳಿಗೆ ಸೂಚ್ಯಾಂಕಗಳನ್ನು ಕಂಡುಹಿಡಿಯಿರಿ.

ಎ) ಲಾಸ್ಪೆಯರ್ ವಿಧಾನ ಬಿ) ಪಾಶ್ಚೆ ವಿಧಾನ

ಸರಕುಗಳು	1990		1995	
	ಬೆಲೆ	ಪ್ರಮಾಣ	ಬೆಲೆ	ಪ್ರಮಾಣ
A	20	15	30	20
B	15	10	20	15
C	30	20	25	10
D	10	5	12	10

VIII. ಯೋಜನೆ ಆಧಾರಿತ ಪ್ರಶ್ನೆ (5 ಅಂಕಗಳು)

1. ಸೆನ್‌ಸೆಕ್ಸ್ (ಸಂವೇದಿ ಸೂಚ್ಯಾಂಕ) ನ್ನು ಕುರಿತು ಟಿಪ್ಪಣಿ ಬರೆಯಿರಿ.

* * *

ಅಧ್ಯಾಯ– 9

ಸಂಖ್ಯಾತ್ಮಕ ಸಾಧನಗಳ ಉಪಯೋಗ

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಸಂಖ್ಯಾತ್ಮಕ ಸಾಧನಗಳು ಇದಕ್ಕೆ ಸಹಾಯಕವಾಗಿದೆ.

ಎ. ಯೋಜನೆಯನ್ನು ಅಭಿವೃದ್ಧಿಪಡಿಸಲು ಬಿ. ಯೋಜನೆಯನ್ನು ಗುರುತಿಸಲು

ಸಿ. ಮಾರಾಟ ಮಾಡಲು ಡಿ. ಉತ್ಪಾದನೆ

2. ಯೋಜನೆಯನ್ನು ಸಿದ್ಧಪಡಿಸುವಲ್ಲಿ ಮೊಟ್ಟ ಮೊದಲ ಹಂತವೆಂದರೆ –

ಎ. ವಿಶ್ಲೇಷಣೆ ಮತ್ತು ಅರ್ಥೈಸುವಿಕೆ ಬಿ. ದತ್ತಾಂಶಗಳ ಸಂಗ್ರಹಣೆ

ಸಿ. ಸಮಸ್ಯೆಯನ್ನು ಗುರುತಿಸಲು ಡಿ. ದತ್ತಾಂಶಗಳ ಸಂಗ್ರಹಣೆ

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಸಮೀಕ್ಷೆಯು ..... ಸಂಗ್ರಹಣೆಯ ವಿಧಾನವನ್ನು ನಿರ್ಧರಿಸಲು ಸಹಾಯಕವಾಗಿದೆ.

2. ..... ಸಿದ್ಧಪಡಿಸುವಾಗ ನಿರ್ಧರಿತ ಗುಂಪಿನ ಆಯ್ಕೆಯು ಬಹಳ ಮುಖ್ಯವಾದುದ್ದಾಗಿದೆ.

III. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಯೋಜನೆಯ ಅಭಿವೃದ್ಧಿಯಲ್ಲಿನ ಕೊನೆಯ ಹಂತವನ್ನು ತಿಳಿಸಿ.

2. ಅನುಭೋಗಿ ಜಾಗೃತಿ ಎಂದರೇನು?

IV. ಕೆಳಗಿನ ಪ್ರಶ್ನೆಗಳಿಗೆ ಸುಮಾರು ನಾಲ್ಕು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕವನ್ನು ಹೊಂದಿರುತ್ತದೆ.)

1. ಯಾವುದಾದರೂ 4 ಸಂಖ್ಯಾತ್ಮಕ ಸಾಧನಗಳನ್ನು ಹೆಸರಿಸಿ.

2. ಯೋಜನೆಯನ್ನು ಅಭಿವೃದ್ಧಿಪಡಿಸುವಲ್ಲಿ ಮೊದಲ ನಾಲ್ಕು ಹಂತಗಳನ್ನು ಬರೆಯಿರಿ.

* * *

ಭಾರತದ ಆರ್ಥಿಕ ಅಭಿವೃದ್ಧಿ

ಅಧ್ಯಾಯ - 1

ಸ್ವಾತಂತ್ರ ಪೂರ್ವದಲ್ಲಿ ಭಾರತದ ಆರ್ಥಿಕತೆ

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ವಸಾಹತುಶಾಹಿ ಆಳ್ವಿಕೆ ಕಾಲದಲ್ಲಿ ಭಾರತದಲ್ಲಿ ಯಾರ ತಲಾ ಆದಾಯದ ಅಂದಾಜು ಪ್ರಯತ್ನಗಳು ಅತ್ಯಂತ ಮಹತ್ವ ಪೂರ್ಣವೆಂದು ಪರಿಗಣಿಸಲಾಗಿದೆ.

   (ಎ) ದಾದಾಬಾಯಿ ನವರೋಜಿ. (ಬಿ) ವಿ ಕೆ ಆರ್ ವಿ ರಾವ್

   (ಸಿ) ವಿಲಿಯಂ ದಿಗ್ಬೆ (ಡಿ) ಆರ್ ಸಿ ದೇಸಾಯಿ

2. ಭಾರತದಲ್ಲಿ ರೈಲು ಸಾರಿಗೆ ಪ್ರಾರಂಭವಾದ ವರ್ಷ_____

   (ಎ) 1835 (ಬಿ) 1776 (ಸಿ) 1850 (ಡಿ) 1853

3. ವಸಾಹತುಶಾಹಿ ಆಳ್ವಿಕೆಯಲ್ಲಿ ಭಾರತದ ಅರ್ಧದಷ್ಟು ವಿದೇಶಿ ವ್ಯಾಪಾರವು ಯಾವ ರಾಷ್ಟ್ರದೊಂದಿಗೆ ನಿರ್ಬಧಿತವಾಗಿತ್ತು.?

   (ಎ) ಬ್ರಿಟನ್ (ಬಿ) ಇರಾನ್ (ಸಿ) ಚೀನಾ (ಡಿ) ಶ್ರೀಲಂಕಾ

4. ಭಾರತದಲ್ಲಿ ಪ್ರತಿ ಈ ಕೆಳಕಂಡ ವರ್ಷಗಳಿಗೊಮ್ಮೆ ಜನಗಣತಿಯನ್ನು ನಡೆಸಲಾಗುತ್ತದೆ.

   (ಎ) 5 (ಬಿ) 10 (ಸಿ) 1 (ಡಿ) 2

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಸ್ವತಂತ್ರ ಪೂರ್ವ ಭಾರತದಲ್ಲಿ ಸೆಣಬಿನ ಕೈಗಾರಿಕೆಗಳು ದೇಶದ _____ ಭಾಗದಲ್ಲಿ ಕೇಂದ್ರೀಕೃತವಾಗಿದ್ದವು.
2. ವಸಾಹತುಶಾಹಿ ಆಳ್ವಿಕೆಯಲ್ಲಿ ಭಾರತದ ಹತ್ತಿಬಟ್ಟೆ ಕೈಗಾರಿಕೆಗಳು_____ ಪ್ರಾಬಲ್ಯಕ್ಕೊಳಪಟ್ಟಿದ್ದವು.
3. _____ ಭಾರತದ ಜನಸಂಖ್ಯಾ ಸ್ಥಿತ್ಯಂತರದ ಎರಡನೇ ಹಂತ ಪ್ರಾರಂಭವಾದ ವರ್ಷ.
4. _____ ಸಾರಿಗೆಯು ಬ್ರಿಟೀಷರ ಪ್ರಮುಖ ಕೊಡುಗೆಯೆಂದು ಪರಿಗಣಿಸಲಾಗಿದೆ.

III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ/ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಬ್ರಿಟೀಷರ ಆಳ್ವಿಕೆಯ ಕಾಲದ ಪ್ರಮುಖ 'ಕಂದಾಯ ಪಾವತಿ ಪದ್ಧತಿ'ಯನ್ನು ಹೆಸರಿಸಿ.
2. TISCO ವನ್ನು ವಿಸ್ತರಿಸಿ.
3. 'ಬಂಡವಾಳ ಸರಕುಗಳ ಕೈಗಾರಿಕೆಗಳು' ಎಂದರೇನು?
4. ಭಾರತದಲ್ಲಿ ಮೊಟ್ಟ ಮೊದಲಿಗೆ ಯಾವಾಗ ಅಧಿಕೃತವಾಗಿ ಜನಗಣತಿ ನಡೆಸಲಾಯಿತು?
5. ವಸಾಹತುಶಾಹಿ ಸರ್ಕಾರ ಕಾಲುವೆ ಸಾರಿಗೆಯನ್ನು ಏಕೆ ರದ್ದು ಪಡಿಸಿತು?

IV. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕಗಳನ್ನು ಹೊಂದಿರುತ್ತದೆ.)

1. ವಸಾಹತುಶಾಹಿ ಸರ್ಕಾರವು ಭಾರತದಲ್ಲಿ ಅನುಸರಿಸಿದ ಆರ್ಥಿಕ ನೀತಿಗಳ ಉದ್ದೇಶವೇನು?
2. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ರಫ್ತುಗಳನ್ನು ಪಟ್ಟಿಮಾಡಿ.

3. ನಮ್ಮ ದೇಶದ ಸ್ವಾತಂತ್ರ್ಯದ ಸಮಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಆಧುನಿಕ ಕೈಗಾರಿಕೆಗಳನ್ನು ಹೆಸರಿಸಿ.

4. ವಸಾಹತುಶಾಹಿ ಆಳ್ವಿಕೆಯಲ್ಲಿ ಅಭಿವೃದ್ಧಿಯಾದ ಮೂಲ ಸೌಕರ್ಯಗಳಾವುವು.

V. ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕವನ್ನು ಹೊಂದಿರುತ್ತದೆ.)

1. 'ಬ್ರಿಟೀಷರ ಆಳ್ವಿಕೆಯಲ್ಲಿ ಭಾರತದ ಕರಕುಶಲ ಕೈಗಾರಿಕೆಗಳು ನಾಶವಾದುವು ಈ ಹೇಳಿಕೆಯನ್ನು ಸಮರ್ಥಿಸಿ.

2. ಸ್ವಾತಂತ್ರ್ಯ ಪೂರ್ವ ಭಾರತದ ವಿದೇಶಿ ವ್ಯಾಪಾರ ಪ್ರಮಾಣ ಮತ್ತು ದಿಕ್ಕನ್ನು ಸೂಚಿಸಿ.

3. ವಸಾಹತುಶಾಹಿ ಆಳ್ವಿಕೆಯಲ್ಲಿ 'ಭಾರತದ ಸಂಪತ್ತು ಬಸಿದು ಹೋಯಿತು' ಎಂಬುದನ್ನು ಏನೆಂದು ಅರ್ಥೈಸುವಿರಿ.

VI. ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಆರು ಅಂಕಗಳನ್ನು ಹೊಂದಿರುತ್ತದೆ.)

1. ವಸಾಹತುಶಾಹಿ ಆಳ್ವಿಕೆಯಲ್ಲಿ ಭಾರತದ ಕೃಷಿವಲಯದ ಸ್ಥಿತಿಗತಿಯನ್ನು ವಿವರಿಸಿ.

2. 'ವಸಾಹತುಶಾಹಿ ಆಳ್ವಿಕೆಯಲ್ಲಿ ಭಾರತದ ಕೈಗಾರಿಕಾವಲಯ ಸದೃಢ ಅಭಿವೃದ್ಧಿ ಸಾಧಿಸಲಿಲ್ಲ' ಈ ಹೇಳಿಕೆಯನ್ನು ಸಮರ್ಥಿಸಿ.

3. ಬ್ರಿಟೀಷರು ಭಾರತಕ್ಕೆ ಸಕಾರಾತ್ಮಕ ಕೊಡುಗೆಗಳನ್ನು ನೀಡಿದ್ದಾರೆಯೆ? ಚರ್ಚಿಸಿ.

* * *

ಅಧ್ಯಾಯ– 2

ಭಾರತದ ಆರ್ಥಿಕತೆ - 1950-1990

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಇವುಗಳಲ್ಲಿ ಯಾವುದು ಪಂಚವಾರ್ಷಿಕ ಯೋಜನೆಗಳ ಗುರಿ ಆಗಿರುವುದಿಲ್ಲ

   ಎ. ಬೆಳವಣಿಗೆ　　ಬಿ. ಆಧುನೀಕರಣ

   ಸಿ. ಸ್ವಸಾಮರ್ಥ್ಯ　　ಡಿ. ಸ್ವಾವಲಂಬನೆ

2. ಹಸಿರು ಕ್ರಾಂತಿಯ ಮೊದಲ ಹಂತದ ಸಾಧನೆಯು ಸಾಧ್ಯವಾದದ್ದು

   ಎ. 1960 – 1970 ರ ಮಧ್ಯದ ದಶಕ　　ಬಿ. 1950 – 1960 ರ ದಶಕ

   ಸಿ. 1970 – 1980 ರ ಮಧ್ಯದ ದಶಕ　　ಡಿ. 1970 – 1980 ರ ದಶಕ

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಯೋಜನಾ ಆಯೋಗದ ಅಧ್ಯಕ್ಷರು _____

2. ಸಣ್ಣ ಪ್ರಮಾಣದ ಕೈಗಾರಿಕೆಗಳು ಬೃಹತ್ ಕೈಗಾರಿಕೆಗಳಿಗಿಂತ ಹೆಚ್ಚಾಗಿ _____ ಅನ್ನು ಬಳಸುತ್ತವೆ.

3. ಪ್ರಾದೇಶಿಕ ಸಮಾನತೆಯು _____ ನ ಮುಖ್ಯ ಉದ್ದೇಶವಾಗಿತ್ತು.

III. ಹೊಂದಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

ಅ	ಬ
1. ಪ್ರಧಾನ ಮಂತ್ರಿ	ಅ. ಅಧಿಕ ಪ್ರಮಾಣದ ಉತ್ಪನ್ನ ನೀಡುವ ಬೀಜಗಳು
2. ಕೋಟಾ	ಬ. ಯೋಜನಾ ಆಯೋಗದ ಅಧ್ಯಕ್ಷರು
3. ಭೂ ಸುಧಾರಣೆ	ಕ. ಸರಕುಗಳನ್ನು ಆಮದು ಮಾಡಿಕೊಳ್ಳುವ ಪ್ರಮಾಣ
4. ಹೆಚ್.ವೈ.ವಿ. ಬೀಜಗಳು	ಡ. ಉತ್ಪಾದನಾ ಚಟುವಟಿಕೆಗಳಿಗಾಗಿ ಸರ್ಕಾರ ನೀಡುವ ಹಣಕಾಸಿನ ಸಹಾಯ
5. ಸಹಾಯಧನ	ಇ. ಉತ್ಪಾದಕತೆ ಹೆಚ್ಚಿಸಲು ಕೃಷಿ ಭೂಮಿಯನ್ನು ಅಭಿವೃದ್ಧಿ ಪಡಿಸುವುದು.

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ/ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ.)

1. ಯೋಜನೆಯನ್ನು ವ್ಯಾಖ್ಯಾನಿಸಿ?

2. ಭೂಸುಧಾರಣೆ ಎಂಬುದನ್ನು ಏನೆಂದು ಅರ್ಥೈಸುವಿರಿ?

3. 'ಮಾರುಕಟ್ಟೆ ಮಿಗುತೆ' ಎಂದರೇನು?

4. ಭೂ ಹಿಡುವಳಿಯ ಗರಿಷ್ಟಮಿತಿ ಎಂದರೇನು?

5. ಯಾವುದಾದರೂ ಒಂದು ಸಾರ್ವಜನಿಕ ವಲಯದ ಕೈಗಾರಿಕೆಯನ್ನು ತಿಳಿಸಿ.

6. ಒಟ್ಟು ದೇಶೀಯ ಉತ್ಪನ್ನದ ಅರ್ಥ ತಿಳಿಸಿ.

V. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕಗಳನ್ನು ಹೊಂದಿರುತ್ತದೆ).

1. ಪಂಚವಾರ್ಷಿಕ ಯೋಜನೆಯ ಗುರಿಗಳಾವುವು?

2. ಸಣ್ಣ ಪ್ರಮಾಣದ ಕೈಗಾರಿಕೆಗಳ ಎರಡು ಪ್ರಯೋಜನೆಗಳನ್ನು ಬರೆಯಿರಿ.

3. ಕೈಗಾರಿಕ ವಲಯವನ್ನು ಸುಧಾರಿಸಲು ಸರ್ಕಾರವು ಏಕೆ ಮಹತ್ವದ ಪಾತ್ರವಹಿಸಿತು?

4. ಸುಂಕ ಮತ್ತು ಕೋಟಾಗಳ ಅರ್ಥಗಳನ್ನು ತಿಳಿಸಿ.

VI. ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕಗಳನ್ನು ಹೊಂದಿರುತ್ತದೆ).

1. ಭಾರತದಲ್ಲಿ ಭೂಸುಧಾರಣೆಯನ್ನು ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

2. ಹಸಿರು ಕ್ರಾಂತಿಯ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

3. ಕೃಷಿ ಸಹಾಯಧನದ ಬಗ್ಗೆ ಟಿಪ್ಪಣಿ ಬರೆಯಿರಿ.

4. ಪಂಚವಾರ್ಷಿಕ ಯೋಜನೆಗಳ ಯಾವುದಾದರೂ 2 ಗುರಿಗಳನ್ನು ವಿವರಿಸಿ.

* * *

ಅಧ್ಯಾಯ-೮

ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ: ಒಂದು ವಿಮರ್ಶೆ

1991 ರ ನಂತರದ ಆರ್ಥಿಕ ಸುಧಾರಣೆಗಳು

I ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

1) ಆರ್ಥಿಕ ಸುಧಾರಣೆಗಳನ್ನು _____ ರಲ್ಲಿ ಜಾರಿಗೊಳಿಸಲಾಯ್ತು.

2) RBI _____ ವಲವನ್ನು ನಿಯಂತ್ರಿಸುತ್ತದೆ.

3) _____ ರಲ್ಲಿ WTO ಸ್ಥಾಪಿತವಾಯಿತು.

4) ವೈಯಕ್ತಿಕ ಆದಾಯದ ಮೇಲಿನ ತೆರಿಗೆಯನ್ನು _____ ಎಂದು ಕರೆಯುತ್ತೇವೆ.

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

1) ಉದಾರೀಕರಣಎಂದರೇನು?

2) ಖಾಸಗೀಕರಣದ ಅರ್ಥ ನೀಡಿ?

3) ಜಾಗತೀಕರಣ ಎಂದರೇನು?

4) IBRD ಯನ್ನು ವಿಸ್ತರಿಸಿ.

5) GATT ಯನ್ನು ವಿಸ್ತರಿಸಿ.

6) ನೇರ ತೆರಿಗೆಯ ಅರ್ಥ ನೀಡಿ.

7) ಹೊರಗುತ್ತಿಗೆಯನ್ನು ಏನೆಂದು ಅರ್ಥೈಸುವಿರಿ.

III. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕಗಳನ್ನು ಹೊಂದಿರುತ್ತದೆ).

1) ಕೈಗಾರಿಕಾ ಪರವಾನಗಿ ಎಂದರೇನು?

2) ಉದಾರೀಕರಣದ ಯಾವುದಾದರೂ ನಾಲ್ಕು ಉದ್ದೇಶಗಳನ್ನು ತಿಳಿಸಿ.

3) ಕೋಶೀಯ ನೀತಿ ಎಂದರೇನು?

4) ಹೊರಗುತ್ತಿಗೆಯ ಸೇವೆಗಳಾವುವು?

5) ಹೂಡಿಕೆ ಹಿಂತೆಗೆತ ಎಂದರೇನು?

6) ನೇರ ಮತ್ತು ಪರೋಕ್ಷ ತೆರಿಗೆಗಳಿಗೆ ಉದಾಹರಣೆ ನೀಡಿ.

IV. ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕಗಳನ್ನು ಹೊಂದಿರುತ್ತದೆ).

1) ಭಾರತದ ಆರ್ಥಿಕ ಸುಧಾರಣೆಗಳ ಹಿನ್ನಲೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

2) ವಿಶ್ವ ವ್ಯಾಪಾರ ಸಂಘಟನೆಯನ್ನು ಕುರಿತು ಟಿಪ್ಪಣಿ ಬರೆಯಿರಿ.

3) ಹಣಕಾಸು ವಲಯದ ಸುಧಾರಣೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

4) ಹೊರಗುತ್ತಿಗೆ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

V. ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಆರು ಅಂಕಗಳನ್ನು ಹೊಂದಿರುತ್ತದೆ).

1) ಉದಾರೀಕರಣದ ಪ್ರಮುಖ ಕ್ಷೇತ್ರಗಳನ್ನು ವಿವರಿಸಿ.

2) ಕೃಷಿ ಕ್ಷೇತ್ರದ ಮೇಲಾದ ಸುಧಾರಣೆಗಳ ಪರಿಣಾಮಗಳನ್ನು ವಿವರಿಸಿ.

V I. ಯೋಜನೆ ಆಧಾರಿತ ಪ್ರಶ್ನೆ

1. ಕೆಳಗಿನ ಬ್ಯಾಂಕ್‌ಗಳಲ್ಲಿ ಕೃಷಿ, ಕೈಗಾರಿಕೆ, ರಾಷ್ಟ್ರೀಕೃತ, ಖಾಸಗಿ ಮತ್ತು ವಿದೇಶಿ ಬ್ಯಾಂಕ್‌ನ್ನು ಗುರುತಿಸಿ.

   ICICI , ಕೆನರಾ ಬ್ಯಾಂಕು, HSBC, IDBI, NABARD.

* * *

ಅಧ್ಯಾಯ– 4

ಬಡತನ (Poverty)

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

1. ಬಡತನದ ರೇಖೆಯು ಇವರನ್ನು ಪ್ರತ್ಯೇಕಿಸುತ್ತದೆ

   ಎ. ಬಡವರು ಮತ್ತು ಬಡವರಲ್ಲದವರು ಬಿ. ಶ್ರೀಮಂತರು ಮತ್ತು ಶ್ರೀಮಂತರಲ್ಲದವರು

   ಸಿ. ಬಡವರು ಮತ್ತು ದುರ್ಬಲರು. ಡಿ. ಮೇಲಿನವುಗಳು ಯಾವುದು ಅಲ್ಲ.

2. ಸ್ವತಂತ್ರ ಪೂರ್ವದಲ್ಲಿ ಭಾರತದಲ್ಲಿ ಇವರು ಬಡತನ ರೇಖೆಯ ಪರಿಕಲ್ಪನೆಯ ಬಗ್ಗೆ ಮೊಟ್ಟಮೊದಲು ಚರ್ಚಿಸಿದರು.

   ಎ. ದಾದಾಭಾಯಿ ನವರೋಜಿ ಬಿ. ಗೋಪಾಲಕೃಷ್ಣ ಗೋಖಲೆ

   ಸಿ. ವಿನೋಭಾ ಭಾವೆ ಡಿ. ವಿನೋದಾ ಬಾಯಿ

3. ಕೆಲವರು ಬಹುತೇಕ ಶ್ರೀಮಂತರಾಗಿದ್ದು, ಕೆಲವು ಸಮಯಗಳಲ್ಲಿ ದುರಾದೃಷ್ಟದಿಂದಾಗಿ ಬಡವರಾಗಬಹುದು. ಇವರನ್ನು ಹೀಗೆಂದು ಕರೆಯಲಾಗುತ್ತದೆ.

   ಎ. ಆಕಸ್ಮಿಕ ಬಡವರು ಬಿ. ಸಾಮಾನ್ಯ ಬಡವರು

   ಸಿ. ಸದಾ ಬಡವರು ಡಿ. ಮೇಲಿನ ಯಾರೂ ಅಲ್ಲ

4. ಈ ಕಾಯಿದೆಯು ಪ್ರತೀ ಬಡ ಕುಟುಂಬದವರಿಗೆ ಕನಿಷ್ಟ 100 ದಿನಗಳ ಕೂಲಿ ಉದ್ಯೋಗವನ್ನು ಒದಗಿಸುವ ಖಾತರಿಯನ್ನು ನೀಡುತ್ತದೆ.

   ಎ. PMRY ಬಿ. SJSRY

   ಸಿ. MGNREGA ಡಿ. SGSY

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

1. ಬಡವರ ಜೀವನವನ್ನು ಸೂಚಿಸುವ ಸಾಂಸ್ಥಿಕ ಮತ್ತು _____ ಅಂಶಗಳಲ್ಲಿ ಬಡತನದ ಕಾರಣಗಳು ಅಡಗಿವೆ.
2. ಬಹುತೇಕ ಬಡತನ ನಿರ್ಮೂಲನ ಕಾರ್ಯಕ್ರಮಗಳು _____ ದೃಷ್ಟಿಕೋನದ ಆಧಾರದ ಮೇಲೆ ಅನುಷ್ಠಾನಗೊಂಡಿವೆ.
3. _____ ರ ಆಳ್ವಿಕೆಯು ಭಾರತದಲ್ಲಿ ಲಕ್ಷಾಂತರ ಜನರನ್ನು ನಿರ್ಗತಿಕರನ್ನಾಗಿ ಮಾಡಿತು
4. ಅರ್ಥಶಾಸ್ತ್ರಜ್ಞರು ವೃತ್ತಿ ಮತ್ತು _____ ಆಧಾರದ ಮೇಲೆ ಬಡವರನ್ನು ಗುರುತಿಸಿದ್ದಾರೆ.

III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

1. ಬಡತನದ ಅರ್ಥ ಕೊಡಿ.
2. ಬಡವರು ಏಕೆ ದೈಹಿಕವಾಗಿ ದುರ್ಬಲರಾಗಿದ್ದರೇ?
3. ಕಡೆಯುವ ಬಡವರೆಂದರೆ ಯಾರು?

4. ಯೋಜನಾ ಆಯೋಗದ ಪ್ರಕಾರ ಬಡತನದ ರೇಖೆಯನ್ನು ವ್ಯಾಖ್ಯಾನಿಸಿ.

5. 'ತಲೆ ಎಣಿಕೆ' ಅನುಪಾತ ಎಂದರೇನು?

6. ವಾರಸುದಾರರಿಲ್ಲದ ಹಿರಿಯ ನಾಗರೀಕರಿಗೆ ಮತ್ತು ಬಡ ಹಾಗು ದಿಕ್ಕಿಲದ ಮಹಿಳೆಯರಿಗೆ ಸಹಾಯ ಮಾಡಲು ಸರ್ಕಾರವು ಜಾರಿಗೆ ತಂದಿರುವ ಕಾರ್ಯಕ್ರಮ ಯಾವುದು?.

IV. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕವನ್ನು ಹೊಂದಿರುತ್ತದೆ).

1. ಅತ್ಯಂತ ಬಡ ಕುಟುಂಬಗಳ ಮುಖ್ಯ ಲಕ್ಷಣಗಳನ್ನು ಪಟ್ಟಿ ಮಾಡಿರಿ.

2. ನಗರ ಪ್ರದೇಶದ ಬಡವರೆಂದರೆ ಯಾರು? ಉದಾಹರಣೆ ಕೊಡಿ.

3. ಗ್ರಾಮೀಣ ಪ್ರದೇಶದ ಬಡವರೆಂದರೆ ಯಾರು? ಉದಾಹರಣೆ ಕೊಡಿ.

4. ಬಡತನವನ್ನು ಪ್ರಚೋದಿಸುವ ಮತ್ತು ಶಾಶ್ವತಗೊಳಿಸುವಂತಹ ಸಾಮಾಜಿಕ ಅಂಶಗಳು ಯಾವುವು?

5. ಬಡವರಿಗೆ ಸ್ವ–ಉದ್ಯೋಗ ಸೃಷ್ಟಿಸುವ ಸರ್ಕಾರದ ಕಾರ್ಯಕ್ರಮಗಳನ್ನು ಹೆಸರಿಸಿ.

6. ಬಡವರ ಆಹಾರ ಮತ್ತು ಪೌಷ್ಟಿಕತೆಯ ಮಟ್ಟವನ್ನು ಸುಧಾರಿಸುವ ಉದ್ದೇಶವನ್ನು ಹೊಂದಿರುವ ಕಾರ್ಯಕ್ರಮಗಳನ್ನು ಪಟ್ಟಿ ಮಾಡಿ.

7. ಬಡತನ ಕಡಿಮೆ ಮಾಡುವ ಕಾರ್ಯಕ್ರಮಗಳ ಅನುಷ್ಠಾನಕ್ಕೆ ತಡೆಯುಂಟು ಮಾಡಿರುವ ಕಾರಣಗಳನ್ನು ಪಟ್ಟಿಮಾಡಿ.

V. ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕಗಳನ್ನು ಹೊಂದಿರುತ್ತದೆ).

1. ಬಡತನವನ್ನು ಕಡಿಮೆಗೊಳಿಸುವ ಬೆಳವಣಿಗೆ ಆಧಾರಿತ ಮಾರ್ಗ ಎಂದರೇನು? ಏಕೆ ಅದು ಭಾರತದಲ್ಲಿ ಯಶಸ್ವಿಯಾಗಿಲ್ಲ?

2. ಭಾರತದಲ್ಲಿ ಬಡತನ ನಿರ್ಮೂಲನೆ ಮಾಡುವ ಉದ್ಯೋಗ ಸೃಷ್ಟಿಯ ಕಾರ್ಯಕ್ರಮಗಳನ್ನು ವಿವರಿಸಿ.

3. ಬಡತನವನ್ನು ಉಪಶಮನಗೊಳಿಸುವ ಸರ್ಕಾರದ ಕಾರ್ಯಕ್ರಮಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿ.

VI. ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಆರು ಅಂಕವನ್ನು ಹೊಂದಿರುತ್ತದೆ).

1. ಬಡತನದ ಕಾರಣಗಳನ್ನು ವಿವರಿಸಿ.

2. ಬಾರತದಲ್ಲಿ ಬಡತನದ ನಿವಾರಣೆಗಾಗಿ ಸರ್ಕಾರ ಕೈಗೊಂಡಿರುವ ಮೂರು ಆಯಾಮದ ಕಾರ್ಯಕ್ರಮಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

VII. ಯೋಜನೆ ಆಧಾರಿತ ಪ್ರಶ್ನೆ (5 ಅಂಕಗಳು)

1. ಬಡತನ ರೇಖೆಯ ಪಟವನ್ನು ಬರೆಯಿರಿ.

* * *

ಅಧ್ಯಾಯ-೮

ಭಾರತದಲ್ಲಿ ಮಾನವ ಬಂಡವಾಳ ನಿರ್ಮಾಣ

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

1) ಈ ಕೆಳಗಿನವರುಗಳಲ್ಲಿ ಯಾರು ಉತ್ತಮವಾಗಿ ಕೆಲಸ ಮಾಡಬಲ್ಲರು.

ಎ. ಅನಾರೋಗ್ಯಪೀಡಿತ ವ್ಯಕ್ತಿ　　ಬಿ. ಅನಾರೋಗ್ಯ ಪೀಡಿತ ಕಾರ್ಮಿಕ

ಸಿ. ಸದೃಢ ಆರೊಗ್ಯ ಹೊಂದಿರುವ ವ್ಯಕ್ತಿ　　ಡಿ. ಮೇಲಿನವುಗಳಲ್ಲಿ ಯಾವುದೂ ಅಲ್ಲ

2) ತಪಸ್ ಮುಜುಂದಾರ್ ಸಮಿತಿಯು ಶಿಕ್ಷಣಕ್ಕಾಗಿ ಜಿ.ಡಿ.ಪಿ.ಯ ಎಷ್ಟರಷ್ಟು ವೆಚ್ಚ ಮಾಡಬೇಕೆಂದು ಅಂದಾಜು ಮಾಡಿದೆ?

ಎ. 4 %　　ಬಿ. 6 %　　ಸಿ. 8 %　　ಡಿ. 5 %

3) ಎಲ್ಲರಿಗೂ ಶಿಕ್ಷಣ ಎಂಬುದು,

ಎ. ಇನ್ನು ದೂರದ ಕನಸು ಅಲ್ಲ　　ಬಿ. ಇನ್ನೂ ದೂರದ ಕನಸು

ಸಿ. ಕನಸು ಮಾತ್ರ　　ಡಿ. ಯಾವುದು ಅಲ್ಲ

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

1) ಶಿಕ್ಷಣದ ಮೇಲಿನ ಹೂಡಿಕೆಯನ್ನು _____ ಪ್ರಮುಖ ಮೂಲಗಳಲ್ಲಿ ಒಂದೆಂದು ಭಾವಿಸಲಾಗಿದೆ.

2) ಭಾರತ ಸರ್ಕಾರವು ಕೂಡ ಎಲ್ಲಾ ಕೇಂದ್ರ ತೆರಿಗೆಗಳ ಮೇಲೆ ಶೇಕಡಾ 2 ರಷ್ಟು _____ ತೆರಿಗೆಯನ್ನು ವಿಧಿಸಲು ಪ್ರಾರಂಭಿಸಿದೆ.

3) ಶಿಕ್ಷಣ ಮೇಲು ತೆರಿಗೆಯಿಂದ ಬರುವ ಆದಾಯವನ್ನು _____ ಮೇಲಿನ ವೆಚ್ಚಕ್ಕಾಗಿ ಮೀಸಲಾಗಿಡುತ್ತಿದೆ.

4) ಆರ್ಥಿಕ ಬೆಳವಣಿಗೆಗೆ ವಿದ್ಯಾವಂತ ವ್ಯಕ್ತಿಯ ಕೊಡುಗೆಯು _____ ವ್ಯಕ್ತಿಗಿಂತ ಹೆಚ್ಚಾಗಿರುತ್ತದೆ.

III. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

(1) ರಾಷ್ಟ್ರೀಯ ಆದಾಯಕ್ಕೆ ಹೆಚ್ಚಿನ ಕೊಡುಗೆ	[1] ಜಾಗತಿಕ ಬೆಳವಣಿಗೆಯ ಕೇಂದ್ರಗಳು
(2) ಡ್ಯೂಸ್ಟೇ ಬ್ಯಾಂಕು	[2] ಭಾರತ ಮತ್ತು ಜ್ಞಾನ ಆರ್ಥಿಕತೆ
(3) ವಿಶ್ವಬ್ಯಾಂಕು	[3] ಸಾಕ್ಷರತಾ ದರ
(4) ಶೈಕ್ಷಣಿಕ ಸಾಧನೆ	[4] ಒಂದು ಧನಾತ್ಮಕ ಅಭಿವೃದ್ಧಿ
(5) ಲಿಂಗಸಮಾನತೆ ಅಭಿವೃದ್ಧಿ	[5] ಕೌಶಲ್ಯಭರಿತ ಶ್ರಮಿಕ

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

1) NCERT– ವಿಸ್ತರಿಸಿ

2) ಜನರ ವಲಸೆಗೆ ಕಾರಣ ತಿಳಿಸಿ.

3) UGC ಯನ್ನು ವಿಸ್ತರಿಸಿ.

4) I.C.M.R ನ್ನು ವಿಸ್ತರಿಸಿ

V. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕಗಳನ್ನು ಹೊಂದಿರುತ್ತದೆ).

1) ಮಾನವ ಬಂಡವಾಳದ ಮೇಲೆ ಹೂಡಿಕೆ ಮಾಡುವ ಅಗತ್ಯತೆಯನ್ನು ತಿಳಿಸಿ.

2) ವ್ಯಕ್ತಿಗಳು ಶಿಕ್ಷಣದ ಮೇಲೆ ಏಕೆ ಹಣ ವೆಚ್ಚ ಮಾಡುತ್ತಾರೆ?

3) ಒಂದು ದೇಶದ ಮಾನವ ಬಂಡವಾಳದ ಎರಡು ಪ್ರಮುಖ ಮೂಲಗಳಾವುವು?

4) ಒಂದು ದೇಶದ ಶೈಕ್ಷಣಿಕ ಸಾಧನೆಯ ಸೂಚಕಗಳಾವುವು?

5) ಮಾನವ ಬಂಡವಾಳ ನಿರ್ಮಾಣಕ್ಕೆ ಕೊಡುಗೆ ನೀಡುವ ಅಂಶಗಳಾವುವು?

6) ಆರೋಗ್ಯ ವೆಚ್ಚಗಳ ವಿವಿಧ ರೂಪಗಳಾವುವು?

VI. ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹನ್ನೆರಡು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ನಾಲ್ಕು ಅಂಕಗಳನ್ನು ಹೊಂದಿರುತ್ತದೆ).

1) ಒಂದು ದೇಶದ ಅಭಿವೃದ್ಧಿಯಲ್ಲಿ ಶಿಕ್ಷಣವನ್ನು ಒಂದು ಮುಖ್ಯ ಸಾಧನವಾಗಿ ಪರಿಗಣಿಸಲಾಗಿದೆ. ಹೇಗೆ?

2) ಮಾನವ ಬಂಡವಾಳದ ಹೂಡಿಕೆಯು ಬೆಳವಣಿಗೆಗೆ ಹೇಗೆ ಕೊಡುಗೆ ಸಲ್ಲಿಸುತ್ತದೆ?

3) ಒಬ್ಬ ವ್ಯಕ್ತಿಗೆ ವೃತ್ತಿನಿರತ ತರಬೇತಿಯ ಅಗತ್ಯತೆಯನ್ನು ತಿಳಿಸಿ.

4) ಭಾರತದಲ್ಲಿ ಮಹಿಳಾ ಶಿಕ್ಷಣವನ್ನು ಉತ್ತೇಜಿಸುವ ಅಗತ್ಯತೆಯನ್ನು ಚರ್ಚಿಸಿ.

VII. ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಆರು ಅಂಕಗಳನ್ನು ಹೊಂದಿರುತ್ತದೆ).

1) ಮಾನವ ಬಂಡವಾಳ ನಿರ್ಮಾಣದ ಮೂಲಗಳಾಗಿ ಕೆಳಗಿನವುಗಳನ್ನು ಚರ್ಚಿಸಿ

[1] ಆರೋಗ್ಯ ಮೂಲ ಸೌಕರ್ಯ [2] ವಲಸೆ ಮೇಲಿನ ವೆಚ್ಚ

2) ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವನ್ನು ಪರಿಶೀಲಿಸಿ.

3) ಮಾನವ ಬಂಡವಾಳ ಮತ್ತು ಆರ್ಥಿಕ ಬೆಳವಣಿಗೆ ನಡುವಿನ ಸಂಬಂಧವನ್ನು ಗುರ್ತಿಸಿ.

* * *

ಅಧ್ಯಾಯ– 6

ಗ್ರಾಮೀಣಾಭಿವೃದ್ಧಿ

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

1. ಬಹುತೇಕ ಕೃಷಿ ಕಾರ್ಮಿಕರು

ಎ. ಶ್ರೀಮಂತರು ಬಿ. ಮಧ್ಯಮ ವರ್ಗದವರು

ಸಿ. ಬಡವರು ಡಿ. ಉನ್ನತವರ್ಗ

2. ಚರ್ಮೋದ್ಯಮ ಮತ್ತು ಪ್ರವಾಸೋದ್ಯಮಗಳು

ಎ. ಕೃಷಿಯೇತರ ಚಟುವಟಿಕೆಗಳು ಬಿ. ಕೃಷಿ ಸಂಬಂಧಿತ ಚಟುವಟಿಕೆಗಳು

ಸಿ. ಇತರ ಚಟುವಟಿಕೆಗಳು ಡಿ. ಉತ್ಪಾದಕ ಚಟುವಟಿಕೆಗಳು

3. ಹಾಲು ಉತ್ಪಾದನೆಯ ಹೆಚ್ಚಳದ ಯಶಸ್ಸು ಇದರ ಯಶಸ್ವಿ ಅನುಷ್ಠಾನಕ್ಕೆ ಸಲ್ಲಬೇಕು

ಎ. ಆಪರೇಷನ್ ಫ್ಲಡ್ ಬಿ. ಆಪರೇಷನ್ ಫುಡ್

ಸಿ. ಆಪರೇಷನ್ ಬ್ಲೂ ಡಿ. ಆಪರೇಷನ್ ಫ್ರೂಟ್

4. ಇದು ಕೃಷಿ ಸಂಬಂಧಿತ ಚಟುವಟಿಕೆಯಾಗಿದೆ.

ಎ. ಕೋಳಿಸಾಕಾಣೆ ಬಿ. ಗೃಹ ಕೈಗಾರಿಕೆ

ಸಿ. ಸಣ್ಣಕೈಗಾರಿಕೆ ಡಿ. ಪ್ರವಾಸೋದ್ಯಮ

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

1. ನಮ್ಮ ದೇಶದ ನೈಜ ಪ್ರಗತಿಯು _____ ಅಭಿವೃದ್ಧಿಯ ಮೇಲೆ ನಿಂತಿದೆ.
2. ಸ್ವಾತಂತ್ರ್ಯ ಸಮಯದಲ್ಲಿ _____ ಸಣ್ಣ ಮತ್ತು ಅಂಚಿನ ರೈತರನ್ನು ಶೋಷಣೆ ಮಾಡುತ್ತಿದ್ದರು
3. _____ ಬೇಸಾಯವು ರಾಸಾಯನಿಕ ಮುಕ್ತ ಬೇಸಾಯವಾಗಿದೆ.
4. ಮೀನುಗಾರ ಸಮುದಾಯವು ಜಲ ಸಂಪನ್ಮೂಲವನ್ನು _____ ಎಂದು ಪರಿಗಣಿಸಿದೆ.

III. ಹೊಂದಿಸಿ ಬರೆಯಿರಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

A	B
1. NABAR D	ಹಾಲಿನ ಉತ್ಪನ್ನ (ಕ್ಷೀರೋತ್ಪನ್ನ)
2. ಲೇವಾದೇವಿಗಾರ	ಸಾಂಸ್ಥಿಕ ಮೂಲ
3. ಹಸಿರುಕ್ರಾಂತಿ	ಹಣ್ಣುಗಳ ಉತ್ಪಾದನೆ
4. ಸುವರ್ಣಕ್ರಾಂತಿ	ಸಾಂಸ್ಥಿಕೇತರ ಮೂಲ
5. ಶ್ವೇತಕ್ರಾಂತಿ	ಆಹಾರೋತ್ಪನ್ನ

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಒಂದು ಅಂಕವನ್ನು ಹೊಂದಿರುತ್ತದೆ).

1. ಗ್ರಾಮೀಣ ಸಾಲ ಎಂದರೇನು?
2. ಕೃಷಿ ಮಾರುಕಟ್ಟೆಯ ಅರ್ಥ ತಿಳಿಸಿ.
3. ಸಾವಯವ ಬೇಸಾಯ ಎಂದರೇನು?
4. PDS ನ್ನು ವಿಸ್ತರಿಸಿ

V. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದು ಪ್ರಶ್ನೆಯೂ ಎರಡು ಅಂಕಗಳನ್ನು ಹೊಂದಿರುತ್ತದೆ).

